**ಕರ್ನಾಟಕ ಸರ್ಕಾರ**

**ಸಹಕಾರ ಇಲಾಖೆ**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಆಸ್ಕರ್ ರಸ್ತೆ, ಬೆಂಗಳೂರು-52**

ನಂ.ಯುಬಿಸಿ-4/224/ಸುತ್ತೋಲೆ/2009-10 ದಿನಾಂಕ 10-03-2010

**:: ಸುತ್ತೋಲೆ ::**

ವಿಷಯ:-ಸಹಕಾರ ಬ್ಯಾಂಕುಗಳು ಮತ್ತು ಸಹಕಾರ ಸಂಸ್ಥೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಸುವ ಬಗ್ಗೆ.

ಉಲ್ಲೇಖ:- 1) ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಸಂಖ್ಯೆ:ಆಡಳಿತ/65/ಎಎಂಸಿ/94-95 ದಿ:22-2-1995.

2) ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಸಂಖ್ಯೆ: ಯುಬಿಸಿ-4/67/ಯುಬಿಎ/97-98 ದಿ:26-11-1997.

3) ಡಾ॥ ಮುಖ್ಯಮಂತ್ರಿ ಚಂದ್ರು, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ:ಕ ಅ ಪ್ರ/ಅ/1339/2009-10 ದಿ:22-2-2010.

---

ಬೆಂಗಳೂರು ನಗರದಲ್ಲಿ ಕೆಲಸ ನಿರ್ವಹಿಸುತ್ತಿರುವ ಹಲವಾರು ಸಹಕಾರ ಬ್ಯಾಂಕುಗಳು ಮತ್ತು ಸಹಕಾರ ಸಂಸ್ಥೆಗಳು ಕನ್ನಡ ಬಳಸದಿರುವುದನ್ನು ನಗರದ ಕೆಲವು ನಾಗರೀಕರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ತಂದಿರುವುದಾಗಿ ಉಲ್ಲೇಖ (3) ರ ಪತ್ರದಲ್ಲಿ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈ ಕಛೇರಿಗೆ ವರದಿ ಮಾಡಿದ್ದಾರೆ. ಈ ಬಗ್ಗೆ ಉಲ್ಲೇಖ (1) ಮತ್ತು (2) ರಲ್ಲಿ ಸುತ್ತೋಲೆ ಮೂಲಕ ಕನ್ನಡ ಬಳಕೆ ಬಗ್ಗೆ ತಿಳಿಸಲಾಗಿದೆ. ಉಲ್ಲೇಖ (2) ರ ಸುತ್ತೋಲೆಯಲ್ಲಿ ಸಹಕಾರ ಬ್ಯಾಂಕುಗಳು ಮತ್ತು ಸಹಕಾರ ಸಂಸ್ಥೆಗಳಲ್ಲಿ ಬಳಸುವ ಎಲ್ಲಾ ಅರ್ಜಿ ಫಾರಂಗಳು ಚಲನ್, ಚೆಕ್, ಡ್ರಾಫ್ಟ್, ಧನಾದೇಶ ಠೇವಣಿಪತ್ರಗಳು ಇತ್ಯಾದಿ ಕನ್ನಡದಲ್ಲಿರಬೇಕೆಂದು ಮತ್ತು ಬ್ಯಾಂಕಿನ/ಸಂಸ್ಥೆಯ ಸಮಸ್ತ ವ್ಯವಹಾರಗಳನ್ನು ಕನ್ನಡದಲ್ಲೇ ನಡೆಸಿ ಕನ್ನಡವನ್ನು ಸಂಪೂರ್ಣ ಅನುಷ್ಠಾನಗೊಳಿಸಬೇಕೆಂದು ತಿಳಿಸಲಾಗಿತ್ತು. ಆದರೆ ಉಲ್ಲೇಖ (3) ರ ಪತ್ರದಿಂದ

ಕನ್ನಡ ಬಳಕೆಯಾಗದೇ ಇರುವುದು ಈ ಕಛೇರಿಯ ಗಮನಕ್ಕೆ ಬಂದಿದೆ. ಆದುದರಿಂದ ಈ ಕೆಳಕಾಣಿಸಿರುವಂತೆ ನಿರ್ದೇಶನಗಳನ್ನು ನೀಡಿ ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ.

1. ಎಲ್ಲಾ ಸಹಕಾರ ಬ್ಯಾಂಕುಗಳು/ಸಹಕಾರ ಸಂಸ್ಥೆಗಳ ಉಪ ನಿಯಮಗಳು, ಸಹಾಯಕ ನಿಯಮಗಳು, ಪೂರಕ ನಿಯಮಗಳು, ನೌಕರರ ಸೇವಾ ನಿಯಮಗಳು ಇತ್ಯಾದಿ ನಿಯಮ ನಿಬಂಧನೆಗಳು ಕನ್ನಡದಲ್ಲಿರಬೇಕು.
2. ಎಲ್ಲಾ ಸಹಕಾರ ಬ್ಯಾಂಕುಗಳು/ಸಹಕಾರ ಸಂಸ್ಥೆಗಳು ಬಳಸುವ ನಗದು ಪುಸ್ತಕಗಳು, ಜನರಲ್ ಲೆಡ್ಜರ್ ಗಳು, ಖಾತೆ ಪುಸ್ತಕಗಳು, ರಸೀದಿ ಪುಸ್ತಕಗಳು, ಓಚರ್ ಪುಸ್ತಕಗಳು ಇತ್ಯಾದಿ ಎಲ್ಲಾ ಲೆಕ್ಕಪತ್ರಗಳನ್ನು ಕನ್ನಡದಲ್ಲಿ ನಿರ್ವಹಿಸಬೇಕು.
3. ಎಲ್ಲಾ ಸಹಕಾರ ಬ್ಯಾಂಕುಗಳು/ಸಹಕಾರ ಸಂಸ್ಥೆಗಳು ಬಳಸುವ ಎಲ್ಲಾ ವಿಧವಾದ ನಮೂನೆಗಳು, ಅರ್ಜಿ ಫಾರಂಗಳು ಸಾಲದ ಅರ್ಜಿಗಳು, ತಿಳುವಳಿಕೆಗಳು, ಚಲನ್‌ಗಳು, ಚೆಕ್, ಡ್ರಾಫ್ಟ್, ಮತ್ತು ಧನಾದೇಶಗಳು, ಠೇವಣಿ ಪ್ರಮಾಣ ಪತ್ರಗಳು, ಪಾಸ್ ಪುಸ್ತಕಗಳು ಇತ್ಯಾದಿ ಕನ್ನಡದಲ್ಲಿರಬೇಕು.
4. ರಜೆ ಮಂಜೂರಾತಿ ಅರ್ಜಿ ಮತ್ತು ಆದೇಶ, ಸಾಲ ಮಂಜೂರಾತಿ ಅರ್ಜಿ ಮತ್ತು ಆದೇಶ ಕಛೇರಿ ಟಿಪ್ಪಣಿಗಳು, ಶಿಸ್ತಿನ ವ್ಯವಹಾರಗಳು, ಸಾಲ ಸದುಪಯೋಗ ಪರಿಶೀಲನಾ ವರದಿಗಳು, ಕಛೇರಿ ಮತ್ತು ಶಾಖಾ ಪರಿವೀಕ್ಷಣಾ ವರದಿಗಳು, ಆಂತರಿಕ ಕಡತ ನಿರ್ವಹಣೆ, ವಿಚಾರಣಾ ವರದಿಗಳು ಇತ್ಯಾದಿ ಕನ್ನಡದಲ್ಲಿರಬೇಕು.
5. ಮಹಾಸಭೆ, ಆಡಳಿತಮಂಡಳಿಯ ಸಭೆ, ಕಾರ್ಯನಿರ್ವಾಹಕ ಸಮಿತಿಯು ಒಳಗೊಂಡಂತೆ ಎಲ್ಲಾ ಉಪ ಸಮಿತಿಗಳ ಸಭೆ ಹಾಗೂ ಇತರೆ ಯಾವುದೇ ಸಭೆಗಳ ಅಜೆಂಡಾ ಟಿಪ್ಪಣಿ ಮತ್ತು ನಡವಳಿಕೆಗಳು ಕನ್ನಡದಲ್ಲಿರಬೇಕು. ವಾರ್ಷಿಕವರದಿಗಳು ಸಹ ಕನ್ನಡದಲ್ಲಿರಬೇಕು.
6. ನೇಮಕಾತಿಗೆ ನೀಡುವ ಸಂದರ್ಶನ ತಿಳುವಳಿಕೆ ಪತ್ರ, ನೇಮಕಾತಿ ಆದೇಶ, ನೇಮಕಾತಿಗೆ ನೀಡುವ ಜಾಹೀರಾತುಗಳು ಸೇರಿದಂತೆ ಪೂರ್ಣ ನೇಮಕಾತಿ ಪ್ರಕ್ರಿಯೆಯು ಕನ್ನಡದಲ್ಲಿರಬೇಕು. ಪಧೋನ್ನತಿ ಆದೇಶ ಹಾಗೂ ಸೇವಾ ಪುಸ್ತಕ ನಿರ್ವಹಣೆ ಸಹ ಕನ್ನಡದಲ್ಲಿರಬೇಕು.
7. ಟೆಂಡರ್ ಪ್ರಕಟಣೆ, ಖರೀದಿ ಪ್ರಕಟಣೆಗಳು, ಆಸ್ತಿ ವಿಲೇವಾರಿ ಮಾಡುವ ಬಗ್ಗೆ ನೀಡುವ ಪ್ರಕಟಣೆಗಳು, ಸಾಧನೆ ಮತ್ತು ಪ್ರಗತಿ ಚಿತ್ರಣ ತೋರಿಸುವ ಪ್ರಕಟಣೆಗಳು, ಮಹಾಸಭೆಯ ಬಗ್ಗೆ ನೀಡುವ ಪ್ರಕಟಣೆಗಳು, ರಜತ ಮಹೋತ್ಸವ ಮತ್ತು ಸುವರ್ಣ ಮಹೋತ್ಸವ ಇತ್ಯಾದಿ ಮಹೋತ್ಸವಗಳ ಪ್ರಕಟಣೆಗಳು ಕನ್ನಡ ಭಾಷೆಯಲ್ಲಿರಬೇಕು.

8. ಸಂಘಗಳು ನೌಕರರೊಡನೆ, ಸಾಲಗಾರರೊಡನೆ, ಬೇರೆ ಸಂಘ ಸಂಸ್ಥೆಗಳೊಡನೆ, ಸದಸ್ಯರೊಡನೆ, ಠೇವಣಿದಾರರೊಡನೆ ಮತ್ತು ಸರ್ಕಾರದೊಡನೆ ಮಾಡಿಕೊಳ್ಳುವ ಒಪ್ಪಂದಗಳು ಮತ್ತು ಕರಾರುಗಳು ಕನ್ನಡದಲ್ಲಿರಬೇಕು.
9. ಲೆಕ್ಕಪತ್ರಗಳನ್ನು ಕಂಪ್ಯೂಟರೀಕರಿಸುವಾಗ ಲಭ್ಯವಿರುವ ಕನ್ನಡ ಸಾಫ್ಟ್‌ವೇರ್‌ಗಳನ್ನೇ ಬಳಸತಕ್ಕದ್ದು. ಈಗಾಗಲೇ ಆಂಗ್ಲ ಭಾಷೆಯಲ್ಲಿರುವ ಸಾಫ್ಟ್‌ವೇರ್‌ಗಳನ್ನು ಕನ್ನಡ ಭಾಷೆಗೆ ಪರಿವರ್ತನೆ ಮಾಡಿಕೊಳ್ಳುವುದು.
10. ಜಮಾ-ಖರ್ಚು ತಃಖ್ತೆ, ಲಾಭ-ನಷ್ಟ ತಃಖ್ತೆ, ಆಸ್ತಿ-ಜವಾಬ್ದಾರಿ ಪಟ್ಟಿ ಮತ್ತು ಸಂಬಂಧಪಟ್ಟ ಎಲ್ಲಾ ಕುಳುವಾರು ಪಟ್ಟಿಗಳು ಸಹ ಕನ್ನಡದಲ್ಲಿರಬೇಕು.
11. ನಾಮಪಲಕ, ಕೆಲಸದ ವೇಳೆ ಮತ್ತು ಲೆಟರ್‌ಹೆಡ್, ಪ್ಯಾಡ್‌ಗಳು ಕನ್ನಡದಲ್ಲಿರಬೇಕು.
12. ಬ್ಯಾಂಕುಗಳು/ಸಹಕಾರ ಸಂಘಗಳ ಎಲ್ಲಾ ಸಿಬ್ಬಂದಿವರ್ಗದವರಿಗೆ ಕನ್ನಡ ಭಾಷೆಯನ್ನು ನಿರರ್ಗಳವಾಗಿ ಓದಲು, ಬರೆಯಲು, ಮಾತನಾಡಲು ಮತ್ತು ಕನ್ನಡದಲ್ಲಿ ಪತ್ರ ವ್ಯವಹಾರ ನಡೆಸಲು ಬರಬೇಕು. ಈಗಾಗಲೇ ನೌಕರಿಯಲ್ಲಿದ್ದು ಕನ್ನಡ ಭಾಷೆ ಬಾರದ ಸಿಬ್ಬಂದಿವರ್ಗದವರಿದ್ದರೆ ಅಂತಹವರಿಗೆ ಕನ್ನಡ ಭಾಷೆಯನ್ನು ಕಲಿಸುವ ವ್ಯವಸ್ಥೆಯನ್ನು ಮಾಡತಕ್ಕದ್ದು.
13. ಬ್ಯಾಂಕುಗಳಿಂದ/ ಸಹಕಾರ ಸಂಸ್ಥೆಗಳಿಂದ ಭಾರತೀಯ ರಿಸರ್ವ್ ಬ್ಯಾಂಕಿಗೆ, ನಬಾರ್ಡ್‌ಗೆ, ಕೇಂದ್ರ ಸರ್ಕಾರಕ್ಕೆ, ಕೇಂದ್ರ ಸರ್ಕಾರದ ಉದ್ದಿಮೆಗಳಿಗೆ ಹಾಗೂ ಹೊರರಾಜ್ಯಗಳಿಗೆ ಹೋಗುವ ಪತ್ರ ವ್ಯವಹಾರಗಳು ಮಾತ್ರ ಆಂಗ್ಲ ಭಾಷೆಯಲ್ಲಿರಬಹುದು.
14. ಸಹಕಾರ ಬ್ಯಾಂಕುಗಳು/ಸಹಕಾರ ಸಂಘ ಸಂಸ್ಥೆಗಳು ಇನ್ನು ಮುಂದೆ ನಡೆಸುವ ಎಲ್ಲಾ ಪತ್ರವ್ಯವಹಾರಗಳು ಕನ್ನಡ ಭಾಷೆಯಲ್ಲಿದ್ದರೆ ಮಾತ್ರ ಪರಿಗಣಿಸಲಾಗುವುದು.

ಈ ಸುತ್ತೋಲೆಯ ಸೂಚನೆಗಳನ್ನು ತಪ್ಪದೇ ಜಾರಿಗೆ ತರಲು ಕಾರ್ಯ ಪ್ರವೃತ್ತರಾಗಬೇಕೆಂದು ಮತ್ತು ಸರ್ಕಾರದ ಕನ್ನಡ ಭಾಷಾ ನೀತಿಯನ್ನು ನಿಷ್ಠೆಯಿಂದ ಸಂಪೂರ್ಣವಾಗಿ ಅನುಷ್ಠಾನಗೊಳಿಸಬೇಕೆಂದು ಕೋರಿದೆ.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**

(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052**

ನಂ.ಯುಬಿಸಿ–4/34/ಸುತ್ತೋಲೆ/2009–10 ದಿನಾಂಕ :15–09–2009

**:: ಸುತ್ತೋಲೆ ::**

ವಿಷಯ:– ಪತ್ತಿನ ಸಹಕಾರ ಸಂಘಗಳಿಂದ ಮೂರನೇ ವ್ಯಕ್ತಿ ಅಕೌಂಟ್ ಪೇಯಿ ಚೆಕ್ಕುಗಳನ್ನು ಸಂಗ್ರಹಿಸುತ್ತಿರುವ ಬಗ್ಗೆ.

ಉಲ್ಲೇಖ:– 1) ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ:ಯುಬಿಡಿ/ಬಿಪಿಡಿ/ಸಿಐಆರ್/ನಂ.30/14.01.062/2005–06 ದಿ:30–1–2006.

2) ಪ್ರಾಂತೀಯ ನಿರ್ದೇಶಕರು, ಕರ್ನಾಟಕ ಇವರ ಪತ್ರ ಸಂಖ್ಯೆ: ಯುಬಿಡಿ/(ಬಿಎಲ್)ನಂ 5173/13.03.323/2008–09 ದಿ:15–6–2009.

3) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಯುಬಿಸಿ–4/34/ಸುತ್ತೋಲೆ/2009–10 ದಿ:10–7–2009.

4) ಡೆಪ್ಯುಟಿ ಜನರಲ್ ಮ್ಯಾನೇಜರ್, ಭಾರತೀಯ ರಿಸರ್ವ್ ಬ್ಯಾಂಕ್, ಬೆಂಗಳೂರು ಇವರ ಪತ್ರ ಸಂಖ್ಯೆ: ಯುಬಿಡಿ(ಬಿಎಲ್) 458/13.03.323/2009–10 ದಿ: 28–7–2009.

---

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ:ಯುಬಿಡಿ/ಬಿಪಿಡಿ/ಸಿಐಆರ್/ನಂ.30/14.01.062/2005–06 ದಿ:30–1–2006 ರಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಮೂರನೇ ವ್ಯಕ್ತಿ ಅಕೌಂಟ್ ಪೇಯಿ ಚೆಕ್ಕುಗಳನ್ನು ಸಂಗ್ರಹಿಸಬಾರದೆಂದು ಸೂಚನೆಗಳನ್ನು ನೀಡಿರುತ್ತಾರೆ. ಆದರೆ ಕೆಲವು ಪಟ್ಟಣ ಸಹಕಾರ ಬ್ಯಾಂಕುಗಳು ಸದರಿ ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿ ಮೂರನೇ ವ್ಯಕ್ತಿ ಅಕೌಂಟ್ ಪೇಯಿ ಚೆಕ್ಕುಗಳನ್ನು ಸಂಗ್ರಹಿಸಿ ತಮ್ಮ ಬ್ಯಾಂಕಿನಲ್ಲಿ ಖಾತೆ ನಿರ್ವಹಿಸುತ್ತಿರುವ ಸಹಕಾರ ಸಂಘಗಳ ಲೆಕ್ಕಕ್ಕೆ ಜಮಾ

ಮಾಡುತ್ತಿದ್ದು, ಇಂತಹ ಚೆಕ್ಕುಗಳ ಸಂಗ್ರಹಣೆಗೆ ಸಂಬಂಧಪಟ್ಟ ಸಹಕಾರ ಸಂಘಗಳ ಉಪ ನಿಯಮಗಳಲ್ಲಿ ಅವಕಾಶವಿರುವುದಾಗಿ ಬ್ಯಾಂಕುಗಳು ಪ್ರತಿಪಾದಿಸುತ್ತಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕಿನವರು ತಿಳಿಸುತ್ತಾ, ಉಲ್ಲೇಖ (1) ರಲ್ಲಿ ನಮೂದಿಸಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಹಾಗೂ ಇಂತಹ ವ್ಯವಹಾರ ಮಾಡದಂತೆ ಸೂಕ್ತ ನಿರ್ದೇಶನ ನೀಡಲು ಹಾಗೂ ಉಪನಿಯಮದಲ್ಲಿ ಈ ರೀತಿಯ ವ್ಯವಹಾರ ಮಾಡಲು ಅವಕಾಶವಿದ್ದಲ್ಲಿ ಸೂಕ್ತ ತಿದ್ದುಪಡಿ ಮಾಡಿಕೊಳ್ಳಲು ಕ್ರಮವಾಗಿ ಉಲ್ಲೇಖ (2) ಮತ್ತು (4) ರಲ್ಲಿ ನಮೂದಿಸಿರುವ ಪತ್ರಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನವರು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ:ಯುಬಿಡಿ/ಬಿಪಿಡಿ/ಸಿಐಆರ್/ನಂ.30/14.01.062/2005–06 ದಿ:30–1–2006 ರಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಮತ್ತು ಮೂರನೇ ವ್ಯಕ್ತಿ ಅಕೌಂಟ್ ಪೇಯಿ ಚೆಕ್ಕುಗಳನ್ನು ಸಂಗ್ರಹಿಸಲು ಯಾವುದೇ ಸಹಕಾರ ಸಂಘದ ಜೊತೆ ಏರ್ಪಾಡು ಮಾಡಿಕೊಳ್ಳತಕ್ಕದ್ದಲ್ಲ ಹಾಗೂ ನಿಮ್ಮ ಬ್ಯಾಂಕಿನ ಉಪ ನಿಯಮದಲ್ಲಿ ಈ ರೀತಿಯ ವ್ಯವಹಾರ ಮಾಡಲು ಅವಕಾಶವಿದ್ದಲ್ಲಿ ಉಪನಿಯಮಕ್ಕೆ ಸೂಕ್ತ ತಿದ್ದುಪಡಿ ಮಾಡಿಕೊಳ್ಳಲು ಸೂಚಿಸಿದೆ.

ಈ ಸುತ್ತೋಲೆಯನ್ನು ಹೊರಡಿಸಿದ ದಿನಾಂಕದಿಂದ ಉಲ್ಲೇಖ (3) ರಲ್ಲಿ ಹೊರಡಿಸಿರುವ ಈ ಕಛೇರಿಯ ಸುತ್ತೋಲೆ ರದ್ದಾಗುತ್ತದೆ.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**

(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052**

ನಂ.ಯುಬಿಸಿ–4/ಎಎಂಡಿ/44/2009–10 ದಿನಾಂಕ 27–07–2009

**:: ಸುತ್ತೋಲೆ ::**

ವಿಷಯ:–ಪಟ್ಟಣ ಸಹಕಾರ ಬ್ಯಾಂಕುಗಳು ಆಡಳಿತಮಂಡಳಿಯಲ್ಲಿ ವೃತ್ತಿಪರ ನಿರ್ದೇಶಕರನ್ನು ಹೊಂದುವ ಬಗ್ಗೆ.

ಉಲ್ಲೇಖ:–ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ: ಆರ್‌ಬಿಐ/ಪಿಸಿಬಿ/ಸಿಐಆರ್/41/09.103.01/2007–08 ದಿ:21–4–2008.

---

ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ: ಆರ್‌ಬಿಐ/ಪಿಸಿಬಿ/ಸಿಐಆರ್/ 41/ 09.103.01/2007–08 ದಿ:21–4–2008 ರನ್ವಯ :–ಪಟ್ಟಣ ಸಹಕಾರ ಬ್ಯಾಂಕುಗಳು ಆಡಳಿತಮಂಡಳಿಯಲ್ಲಿ ವೃತ್ತಿ ಅರ್ಹನೆ ಹೊಂದಿರುವವರು ಅಂದರೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಧ್ಯಮ/ಹಿರಿಯ ವ್ಯವಸ್ಥಾಪನಾ ಮಟ್ಟದಲ್ಲಿ ಅನುಭವವುಳ್ಳವರು ಅಥವಾ ಕಾನೂನು/ಅಕೌಂಟೆನ್ಸಿ ಅಥವಾ ಹಣಕಾಸಿನ ಕ್ಷೇತ್ರದಲ್ಲಿ ವೃತ್ತಿಪರ ಅರ್ಹತೆ ಹೊಂದಿರುವ ಇಬ್ಬರು ನಿರ್ದೇಶಕರು ಇರಬೇಕೆಂದಿರುತ್ತದೆ.

ಆದರೆ ರಾಜ್ಯದಲ್ಲಿನ ಬಹುತೇಕ ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಉಪ ನಿಯಮಗಳಲ್ಲಿ ವೃತ್ತಿಪರ ನಿರ್ದೇಶಕರನ್ನು ಹೊಂದುವ ಬಗ್ಗೆ ಅವಕಾಶ ಕಲ್ಪಿಸದಿರುವುದನ್ನು ಭಾರತೀಯ ರಿಸರ್ವ್ ಬ್ಯಾಂಕ್ ಗಮನಿಸಿದೆ. ಈ ಬಗ್ಗೆ ದಿ:20–7–2009 ರಲ್ಲಿ ನಡೆದ 40ನೇ ಟ್ಯಾಫ್ ಕಬ್ ಸಭೆಯಲ್ಲಿ ಚರ್ಚೆಯಾಗಿದ್ದು ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಉಪ ನಿಯಮಗಳಲ್ಲಿ ಸೂಕ್ತ ಅವಕಾಶ ಕಲ್ಪಿಸಲು ಸೂಚಿಸುವ ತೀರ್ಮಾನ ಕೈಗೊಳ್ಳಲಾಗಿದೆ.

ಆದುದರಿಂದ ನಿಮ್ಮ ಬ್ಯಾಂಕಿನ ಆಡಳಿತಮಂಡಳಿಯ ಒಟ್ಟು ನಿರ್ದೇಶಕರ ಪೈಕಿ ಕನಿಷ್ಠ ಇಬ್ಬರು ವೃತ್ತಿ ಅರ್ಹತೆ ಹೊಂದಿರುವವರು ಅಂದರೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮಧ್ಯಮ/ಹಿರಿಯ ವ್ಯವಸ್ಥಾಪನಾ ಮಟ್ಟದಲ್ಲಿ ಅನುಭವವುಳ್ಳವರು ಅಥವಾ ಕಾನೂನು/ಅಕೌಂಟೆನ್ಸಿ ಅಥವಾ ಹಣಕಾಸಿನ ಕ್ಷೇತ್ರದಲ್ಲಿ ವೃತ್ತಿಪರ ಅರ್ಹತೆ ಹೊಂದಿರುವ ನಿರ್ದೇಶಕರನ್ನು ಹೊಂದುವ ಬಗ್ಗೆ ಬ್ಯಾಂಕಿನ ಉಪ ನಿಯಮಗಳಲ್ಲಿ ಸೂಕ್ತ ಅವಕಾಶ ಕಲ್ಪಿಸಿ ಸಂಬಂಧಿಸಿದ ಉಪ ನಿಯಮದ ತಿದ್ದುಪಡಿಯನ್ನು ಮುಂಬರುವ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿ ಸಭೆಯ ಅಂಗೀಕಾರ ಪಡೆದು ಇಲಾಖಾ ಅನುಮೋಧನೆ ಪಡೆಯಲು ಕ್ರಮವಿಡತಕ್ಕದ್ದು.

ಸಹಿ/–

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**

(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052**

ನಂ.ಯುಬಿಸಿ–4/52/ಆರ್ ಬಿ ಐ/2008–09 ದಿನಾಂಕ 30–09–2008

**:: ಸುತ್ತೋಲೆ ::**

ವಿಷಯ:–ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ, ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆಗಳಿಗೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ.

ಉಲ್ಲೇಖ–1) ಈ ಕಛೇರಿಯ ಸುತ್ತೋಲೆ (176)ಯುಬಿಸಿ/267/ಯುಸಿಎಸ್/ 2001–02 ದಿ:3–6–2002.

2) ಈ ಕಛೇರಿಯ ಪತ್ರ ಸಂಖ್ಯೆ: ಯುಬಿಸಿ–4/52/ಆರ್ ಬಿ ಐ/2008–09 ದಿ:19–8–2008.

3) ದಿನಾಂಕ:1–9–2008 ರಂದು ನಡೆದ ಟ್ಯಾಫ್ ಕಬ್ ಸಭೆಯ ನಡವಳಿಗಳು.

****

1934 ರ ಭಾರತೀಯ ರಿಸರ್ವ್ ್ ಬ್ಯಾಂಕ್ ಕಾಯ್ದೆ, 1949 ರ ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ ಹಾಗೂ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆಗಳ ಸೂಚನೆಗಳನ್ನು ಉಲ್ಲಂಘಿಸದಿರಲು ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ಉಲ್ಲೇಖ (1) ರಲ್ಲಿ ನಮೂದಿಸಿರುವ ಸುತ್ತೋಲೆಗಳಲ್ಲಿ ಸೂಚನೆಗಳನ್ನು ನೀಡಲಾಗಿದೆ. ಆದರೆ ಈ ಸುತ್ತೋಲೆಯಲ್ಲಿನ ಸೂಚನೆಗಳನ್ನು ಪಾಲನೆ ಮಾಡದಿರುವುದು ಈ ಕಛೇರಿಯ ಹಾಗೂ

ಭಾರತೀಯ ರಿಸರ್ವ್ ಬ್ಯಾಂಕ್‌ನ ಗಮನಕ್ಕೆ ಬಂದಿದೆ. ಆದುದರಿಂದ ಈ ಹಿನ್ನೆಲೆಯಲ್ಲಿ ಕೆಳಕಂಡ ಸೂಚನೆಗಳನ್ನು ರಾಜ್ಯದಲ್ಲಿನ ಎಲ್ಲಾ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಿಗೆ ನೀಡಲಾಗಿದೆ.

1. ಕೃಷಿಯೇತರ ಪತ್ತಿನ ಸಹಕಾರ ಸಂಘಗಳು “ಬ್ಯಾಂಕ್ ” ಎಂಬ ಪದವನ್ನು ಬಳಸಬಾರದು.
2. ಸಂಘದ ಸದಸ್ಯರಿಂದ ಮಾತ್ರ ಠೇವಣಿಗಳನ್ನು ಸ್ವೀಕರಿಸತಕ್ಕದ್ದು.
3. ಸಂಘದ ಹೆಸರಿನ ಚೆಕ್ಕನ್ನು ಮುದ್ರಿಸಕೂಡದು.
4. ಸಂಘದ ಸದಸ್ಯರಲ್ಲದವರಿಂದ ಯಾವುದೇ ರೀತಿಯ ಠೇವಣಿಯನ್ನು ಸ್ವೀಕರಿಸಬಾರದು.
5. ಬ್ಯಾಂಕಿಂಗ್ ವ್ಯವಹಾರವನ್ನು ಕೈಗೊಳ್ಳಕೂಡದು.
6. ಸದಸ್ಯರಲ್ಲದವರಿಂದ ಪಿಗ್ಮಿ ಠೇವಣಿ ಸಂಗ್ರಹಿಸಕೂಡದು.
7. ಸಂಘದ ಉಪ ನಿಯಮಗಳಲ್ಲಿ ಅವಕಾಶವಿರುವ ಉದ್ದೇಶಗಳ ಚೌಕಟ್ಟಿನಲ್ಲಿಯೇ ವ್ಯವಹರಿಸತಕ್ಕದ್ದು.
8. ಕರ್ನಾಟಕ ಸಹಕಾರ ಸಂಘಗಳ ನಿಯಮ 28 ರ ರೀತ್ಯಾ ( ಈ ಕಛೇರಿಯ ಸುತ್ತೋಲೆ ಸಂಖ್ಯೆ ಆರ್ ಎಸ್ ಆರ್ /104/ಎಕ್ಸ್ ಎಂ ಸಿ/92–93 ದಿ:29–9–92 ರಲ್ಲಿ ಸೂಚಿಸಿರುವ ಪ್ರಕಾರ) ನಗದು ಮೀಸಲು. (ಅಛ್ಞು ಡಿಜಜಡಿತಜ)ಹಾಗೂ ದ್ರವ್ಯಾಸ್ತಿ (ಃಡಣಾಜ ್ರಜಣ) ನಿರ್ವಹಿಸತಕ್ಕದ್ದು.
9. ಚೆಕ್ ಡಿಸ್ಕೌಂಟ್ ಮಾಡಕೂಡದು.
10. ವ್ಯವಹಾರಕ್ಕನುಗುಣವಾಗುವಷ್ಟೇ ಠೇವಣಿಯನ್ನು ಸದಸ್ಯರಿಂದ ಮಾತ್ರ ಸಂಗ್ರಹಿಸತಕ್ಕದ್ದು. (ಬೇರೆ ಸಂಘ ಸಂಸ್ಥೆಗಳಲ್ಲಿ ಠೇವಣಾತಿಸುವ ದೃಷ್ಟಿಯಿಂದ ಠೇವಣಿ ಸಂಗ್ರಹಿಸಕೂಡದು).
11. ಸಂಘದ ಹಣವನ್ನು ಷೇರು ಬಜಾರಿನಲ್ಲಿ ತೊಡಗಿಸಕೂಡದು.
12. ಇತರೆ ವೆಚ್ಚಗಳನ್ನು ಗಣನೀಯವಾಗಿ ಕಡಿತಗೊಳಿಸತಕ್ಕದ್ದು
13. ಸಾಲಗಳನ್ನು ಮಂಜೂರು ಮಾಡುವಾಗ ಮುಖ್ಯವಾಗಿ ಭದ್ರತೆ ಹಾಗೂ ಮರುಪಾವತಿ ಸಾಮರ್ಥ್ಯವನ್ನು ಗಮನದಲ್ಲಿಡಬೇಕು.
14. ಸದಸ್ಯರಿಗೆ ಮಂಜೂರು ಮಾಡುವ ಎಲ್ಲಾ ಸಾಲಗಳನ್ನು ಚೆಕ್ ಮುಖಾಂತರವೇ ವಿತರಿಸತಕ್ಕದ್ದು.
15. ಯಾವುದೇ ಸಂದರ್ಭದಲ್ಲಿ ನಗದು ಶಿಲ್ಕು (ಅಛ್ಞು ಃಚಿಟಚಿಟಿಛಿಜ) ಉಪ ನಿಯಮಗಳಲ್ಲಿ ನಮೂದಿಸಿದ ಮಿತಿ ಮೀರಬಾರದು ಅಥವಾ ಆಡಳಿತಮಂಡಳಿ ನಿಗದಿಪಡಿಸಿದಂತೆ ನಿರ್ವಹಿಸತಕ್ಕದ್ದು.
16. ಠೇವಣಿ, ಸಾಲಗಳ ಕುರಿತಂತೆ ಒಳನಿಯಮಗಳನ್ನು ರಚಿಸಿಕೊಳ್ಳತಕ್ಕದ್ದು.
17. ಮಾರುಕಟ್ಟೆಯ ಚಾಲ್ತಿ ಪರಿಸ್ಥಿತಿ, ಸಂಘದ ಆರ್ಥಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಠೇವಣಿಗಳ ಮೇಲಿನ ಬಡ್ಡಿಯನ್ನು ನಿಗದಿಪಡಿಸುವುದು ಮತ್ತು ಕಾಲಕಾಲಕ್ಕೆ ಸೂಕ್ತ ಬದಲಾವಣೆ

ತರುವುದು. (ಅಧಿಕ ಬಡ್ಡಿಯನ್ನು ನಿಗದಿಪಡಿಸಿ ಸಂಘಕ್ಕೆ ಯಾವುದೇ ಸಂದರ್ಭದಲ್ಲಿ ಹಾನಿಯಾಗಕೂಡದು.

18. ಓರ್ವ ಸದಸ್ಯನು ಗರಿಷ್ಠ ಎಷ್ಟು ಸಾಲ ಪಡೆಯಬಹುದೆಂಬುದನ್ನು ಉಪ ನಿಯಮದಲ್ಲಿ ನಿರ್ಧಿಷ್ಟವಾಗಿ ನಿಗದಿಪಡಿಸಬೇಕು.
19. ಸುಸ್ತಿ ಸಾಲಗಳ ಬಗ್ಗೆ ನಿಗದಿತ ಕಾಲದೊಳಗೆ ತಪ್ಪದೇ ಕಾನೂನು ಕ್ರಮ ಜರುಗಿಸುವುದು ಹಾಗೂ ಅಮಲ್ಜಾರಿಗಳನ್ನು ಕಟ್ಟುನಿಟ್ಟಾಗಿ ವಿಳಂಬವಿಲ್ಲದೆ ಜಾರಿಗೊಳಿಸುವುದು.
20. ಸಾಲದ ಅರ್ಜಿಗಳ ಜೇಷ್ಟತೆಯ ಆಧಾರದ ಮೇಲೆ ಸಾಲ ಮಂಜೂರು ಮಾಡತಕ್ಕದ್ದು.
21. ಹಣ ದುರುಪಯೋಗ ಪ್ರಕರಣಗಳಲ್ಲಿ ತುರ್ತಾಗಿ ವಸೂಲಾತಿಗೆ ಕ್ರಮವಿಡುವುದು.
22. ಸಂಘದ ಪ್ರತಿ ನೌಕರನಿಗೂ ಪ್ರತ್ಯೇಕ ಜಾಬ್ ಚಾರ್ಟ್ ಜಾರಿ ಮಾಡಿ ಸ್ವೀಕೃತಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಲ್ಲಿ ಇಡತಕ್ಕದ್ದು. ಹಾಗೂ ನೌಕರರಿಂದ ಸೂಕ್ತ ಭದ್ರತೆ ಹಾಗೂ ಫಿಡಿಲಿಟಿ ಬಾಂಡ್‌ಗಳನ್ನು ಪಡೆದು ಸುರಕ್ಷಿತವಾಗಿಡುವುದು.
23. ನೌಕರರ ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ಮಂಜೂರು ಮಾಡುವ ಸಂದರ್ಭದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 34 ರನ್ವಯ ಕಡ್ಡಾಯವಾಗಿ ಮುಚ್ಚಳಿಕೆ ಪತ್ರ ಪಡೆಯತಕ್ಕದ್ದು.
24. ತ್ರೈಮಾಸಿಕವಾಗಿ ಎಲ್ಲಾ ಪಟ್ಟಣ ಸಹಕಾರ ಸಂಘಗಳು ತಮ್ಮ ಕಾರ್ಯವ್ಯಾಪ್ತಿಯ ಉಪ ನಿಬಂಧಕರಿಗೆ ಸಂಘದ ಎಲ್ಲಾ ಮಾಹಿತಿಗಳನ್ನೊಳಗೊಂಡ ಅಂಕಿ ಅಂಶಗಳನ್ನು ತಪ್ಪದೇ ಒದಗಿಸತಕ್ಕದ್ದು. (ಒಟ್ಟು ಸದಸ್ಯತ್ವ ಅದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಸದಸ್ಯರು, ಮಹಿಳಾ ಸದಸ್ಯರು ಹಾಗೂ ಸಾಮಾನ್ಯ ವರ್ಗದ ಸದಸ್ಯರನ್ನು ಪ್ರತ್ಯೇಕವಾಗಿ ನಮೂದಿಸುವುದು. ಠೇವಣಿ ಸಾಲ, ಸಿಬ್ಬಂದಿ ವಿವರ, ಆಡಳಿತಮಂಡಳಿ ಸದಸ್ಯರ ಚುನಾವಣಾ ವಿವರಗಳು)

ಮೇಲೆ ನಮೂದಿಸಿರುವ ಎಲ್ಲಾ ಸೂಚನೆಗಳನ್ನು ತಪ್ಪದೇ ಪಾಲಿಸತಕ್ಕದ್ದು. ಉಲ್ಲಂಘನೆ ಮಾಡಿದಲ್ಲಿ ಸಂಬಂಧಪಟ್ಟ ಆಡಳಿತಮಂಡಳಿಯ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಿ ಕಾನೂನು ಕ್ರಮ ಜರುಗಿಸಲಾಗುವುದು.

ಸಹಿ/-

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

**<u>ಕರ್ನಾಟಕ ಸರ್ಕಾರ</u>**

(ಸಹಕಾರ ಇಲಾಖೆ)

**<u>ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052</u>**

ನಂ.ಯುಬಿಸಿ–1/ಯುಎಂಸಿ/99/93–94 ದಿನಾಂಕ 2–2–1994

**<u>:: ಸುತ್ತೋಲೆ ಸಂಖ್ಯೆ–19 ::</u>**

ವಿಷಯ:– ನಗರ ಪತ್ತಿನ ಸಹಕಾರ ಸಂಘಗಳ ಹಾಗೂ ನೌಕರರ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡಬೇಕಾದಾಗ ಅನುಸರಿಸಬೇಕಾದ ನಿಯಮಗಳು

ಉಲ್ಲೇಖ:– ಈ ಕಛೇರಿಯ ಸುತ್ತೋಲೆ ಕ್ರಮಾಂಕ:ಯುಬಿಸಿ.ಎಸ್.ಟಿ.43.84–85
ದಿ: 23–4–84, 16–5–86, 22–4–87, 29–12–87 ಮತ್ತು 24–2–93.

---

ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ಮತ್ತು ನೌಕರರ ಪತ್ತಿನ ಸಹಕಾರ ಸಂಘಗಳನ್ನು ನೋಂದಾಯಿಸುವಾಗ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 7 ರನ್ವಯ, ಅಧಿಕಾರ ಹೊಂದಿದ ಇಲಾಖಾಧಿಕಾರಿಗಳು ಸಂಘದ ಉಪ ನಿಬಂಧನೆಗಳನ್ನು ಕೂಲಂಕಷವಾಗಿ ಪರಿಶೀಲಿಸದೆ, ಒಂದೇ ಕಾರ್ಯವ್ಯಾಪ್ತಿಯಲ್ಲಿ ಅಂತಹ ಸಂಘಗಳ ಆರ್ಥಿಕ ಸಬಲತೆಯನ್ನು ಪರಿಗಣಿಸದೆ ಒಂದಕ್ಕೂ ಹೆಚ್ಚಿನ ಪತ್ತಿನ ಸಹಕಾರ ಸಂಘಗಳನ್ನು ನೋಂದಾಯಿಸುತ್ತಿರುವುದು ನಿಬಂಧಕರ ಗಮನಕ್ಕೆ ಬಂದು ಸಮಯ ಸಮಯಕ್ಕೆ ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಿರುವುದು ಸರಿಯಷ್ಟೆ.

ಸಂಘಗಳ ಉಪ ನಿಬಂಧನೆಗಳನ್ನು ಅನುಮೋದಿಸುವಾಗ ಪತ್ತಿನ ಸಹಕಾರ ಸಂಘಗಳು ಸದಸ್ಯೇತರರಿಂದ ಠೇವಣಿ ಪಡೆಯುವುದಾಗಲೀ ಅಥವಾ ಸದಸ್ಯೇತರರಲ್ಲಿ ವ್ಯವಹಾರವನ್ನು ನಡೆಸುವುದಾಗಲೀ ನಿರ್ಬಂಧಿಸಬೇಕಾಗಿರುತ್ತದೆ. ಹಲವಾರು ಸಮಯಗಳಲ್ಲಿ ಪತ್ತಿನ ಸಹಕಾರ ಸಂಘಕ್ಕೆ ಬ್ಯಾಂಕ್ ಎಂದು ಹೆಸರುಗಳನ್ನು ನಮೂದಿಸಿರುವುದು ತಪ್ಪಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನವರು ಈ ಬಗ್ಗೆ ಕಾಲ ಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿರುತ್ತಾರೆ. ಯಾವುದೇ ಬ್ಯಾಂಕಿಂಗ್ ಸಂಸ್ಥೆಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಪಡೆಯದೆ ನೋಂದಾಯಿಸಲಿಕ್ಕೆ ಬರಲಾರದು.

ಈ ದಿಸೆಯಲ್ಲಿ ರಾಜ್ಯದೊಂದಿಗೆ ಕೃಷಿಯೇತರ ಪತ್ತಿನ ಸಹಕಾರ ಸಂಘಗಳನ್ನು ನೋಂದಾಯಿಸುವಾಗ ಎಲ್ಲಾ ಅಧಿಕಾರಿಗಳು ಒಂದೇ ತರಹದ ಪದ್ಧತಿಯನ್ನು ಅನುಸರಿಸಬೇಕಾಗುವುದು ಅವಶ್ಯವೆಂದು ಮನಗಂಡು ಕೆಳಕಂಡ ಮಾರ್ಗಸೂಚಿಗಳನ್ನು ಹಾಗೂ ಅನುಬಂಧ–1 ಮತ್ತು 2 ರನ್ವಯ ಷರತ್ತುಗಳನ್ನು ನಿಗದಿಪಡಿಸಿದೆ.

ಈ ಮಾರ್ಗಸೂಚಿಯನ್ವಯ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 7 ರನ್ವಯ ಅಧಿಕಾರ ಪಡೆದ ಇಲಾಖಾಧಿಕಾರಿಗಳು ಆಯಾ ವ್ಯಾಪ್ತಿಗೆ ಸಂಬಂಧಿಸಿದಂತೆ ಸಂಘಗಳನ್ನು ನೋಂದಾಯಿಸಲು ಕ್ರಮವಿಡಬಹುದಾಗಿದೆ. ಮಾರ್ಗಸೂಚಿಗಳನ್ನು ಅನುಸರಿಸಿ ಮಾತ್ರ ಸಂಘಗಳನ್ನು ನೋಂದಾಯಿಸುವುದು ಅಥವಾ ತಿರಸ್ಕರಿಸುವುದು ಆಯಾ ಇಲಾಖೆಯ ಅಧಿಕಾರಿಗಳ ಹೊಣೆಯಾಗಿದ್ದು, ನೀಡಿರುವ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿ ಯಾವುದೇ ಪತ್ತಿನ ಸಹಕಾರ ಸಂಘಗಳನ್ನು ನೋಂದಾಯಿಸಿದಲ್ಲಿ ಆಯಾ ಅಧಿಕಾರಿಗಳೇ ಜವಾಬ್ದಾರರಾಗುತ್ತಾರೆ.

**<u>ಮಾರ್ಗಸೂಚಿಗಳು:</u>**

1. ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸುವ ಪೂರ್ವದಲ್ಲಿ ಮುಖ್ಯ ಪ್ರವರ್ತಕರಿಗೆ ಅನುಮತಿ ನೀಡುವಾಗ ಸ್ಥಳೀಯ ಜನಸಂಖ್ಯೆ ಹಾಲಿ ಇರುವ ಸಂಘಗಳ ವ್ಯವಹಾರದ ಮೊತ್ತ ಹಾಗೂ ಹೊಸ ಸಂಘವು ಆರ್ಥಿಕ ಸಬಲತೆಯನ್ನು ಹೊಂದುವುದೇ ಎಂಬ ಬಗ್ಗೆ ಖಾತರಿ ಮಾಡಿಕೊಳ್ಳತಕ್ಕದ್ದು.
2. ನೋಂದಣಾಧಿಕಾರಿಗಳು ಪಟ್ಟಣ ಸಹಕಾರ ಸಂಘಗಳ ನೋಂದಣಿಯ ಬದಲು ನಿಜ ಸದಸ್ಯತ್ವವನ್ನು ತಿಳಿಯುವ ಸಲುವಾಗಿ, ಪಡಿತರ ಚೀಟಿ, ಚುನಾವಣಾ ಪಟ್ಟಿ ಮತ್ತು ಡ್ರೈವಿಂಗ್ ಲೈಸೆನ್ಸ್ ಪತ್ರಗಳನ್ನು ಯದೃಚ್ಛಿಕ ಪದ್ಧತಿಯನ್ನು ಪರಿಶೀಲಿಸಿ ಖಾತರಿ ಮಾಡಿಕೊಳ್ಳಬೇಕು.
3. ಪತ್ತಿನ ಸಹಕಾರ ಸಂಘಗಳಲ್ಲಿ ದ್ವಿಸದಸ್ಯತ್ವ ತಡೆಗಟ್ಟಲು ಪ್ರಸ್ತುತ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಕಡೆಗಳಲ್ಲಿ ಆ ಸಹಕಾರ ಸಂಘದ ಹಿತದೃಷ್ಟಿಯಿಂದ ಹೊಸ ಸಂಘವನ್ನು ಸ್ಥಾಪಿಸುವುದು ಸರಿಯಾಗದೆಂದು ಮುಖ್ಯ ಪ್ರವರ್ತಕರಿಗೆ ಮನವರಿಕೆ ಮಾಡಿಕೊಡಬೇಕು.
4. ಸಂಘದ ಉಪ ನಿಯಮಗಳಲ್ಲಿ "ಬ್ಯಾಂಕ್ " "ಬ್ಯಾಂಕರ್" ಬ್ಯಾಂಕಿಂಗ್ ಇತರೆ ಮೂಲಗಳಿಂದ "ಸದಸ್ಯೇತರರಿಂದ" ಇತರರಿಂದ ಎಂಬ ಶಬ್ದಗಳನ್ನು ಉಪಯೋಗಿಸಕೂಡದು.
5. ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವಾಗ ಅಥವಾ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಪತ್ತಿನ ಸಹಕಾರ ಸಂಘಗಳ ಉಪ ನಿಯಮದಲ್ಲಿ ಸದಸ್ಯೇತರರಿಂದ

ಶೇವಣಿ ಸಂಗ್ರಹಿಸಲು ಅವಕಾಶವಿದ್ದಲ್ಲಿ ಅಂತಹ ಸಂಘಗಳಿಗೆ ಉಪ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡಿಕೊಳ್ಳುವಂತೆ ಹಾಗೂ ಈಗಾಗಲೇ ಈ ರೀತಿ ಹಣ ಸಂಗ್ರಹಿಸಿದ್ದಲ್ಲಿ ಠೇವಣಿಗಳನ್ನು ಸಂಬಂಧಪಟ್ಟ ಸದಸ್ಯರಿಗೆ ವಾಪಸ್ಸು ಮಾಡುವಂತೆ ಸೂಚನೆ ನೀಡಬೇಕು. ಈ ರೀತಿ ನೀಡಲಾದ ಸೂಚನೆ ಪಾಲಿಸಲು ತಪ್ಪಿದಲ್ಲಿ, ಸಹಕಾರ ಸಂಘಗಳ ಕಾಯ್ದೆ 12(5) ಹಾಗೂ (6) ರನ್ವಯ ಪೋಟಾ ನಿಯಮಗಳ ತಿದ್ದುಪಡಿಗೆ ಕ್ರಮ ಕೈಗೊಳ್ಳುವುದು.

6. ಭೌಗೋಳಿಕ ಕಾರಣಗಳಿಂದ ಒಂದಕ್ಕೂ ಹೆಚ್ಚಿನ ಅರೆ ನಗರ ಪ್ರದೇಶಗಳನ್ನು ಸೇರಿಸಿ ಪತ್ತಿನ ಸಹಕಾರ ಸಂಘವನ್ನು ನೋಂದಣಿ ಮಾಡಲು ಸಮರ್ಪಕ ಕಾರಣಗಳಿದ್ದಲ್ಲಿ, (ಅಂದರೆ ಹಳ್ಳಿಗೆ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿಲ್ಲದಿದ್ದಲ್ಲಿ, ಅಥವಾ ಇತರೆ ಕಾರಣಗಳಿಂದ ಒಂದು ವರ್ಗದ ವ್ಯಾಪ್ತಿಯಲ್ಲಿ ಸಂಘವನ್ನು ರಕ್ಷಿಸಲು ಸಾಧ್ಯವಿಲ್ಲದ ಪಕ್ಷದಲ್ಲಿ) 10 ಕಿ.ಮೀ. ವ್ಯಾಪ್ತಿಯ ಒಳಗೆ ಬರುವ ಹಳ್ಳಿಗಳನ್ನು ಅಥವ ಅರೆ ನಗರ ಪ್ರದೇಶಗಳನ್ನು ಕೂಡಿಸಿ ಒಂದು ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಲು ಕ್ರಮವಿಡಬಹುದಾಗಿದೆ. ಆದರೆ, ಇಂತಹ ಪ್ರದೇಶಗಳಲ್ಲಿ ಈಗಾಗಲೇ ಸಂಘಗಳಿರುವ ಅರೆ ನಗರ ಅಥವಾ ಹಳ್ಳಿಗಳು ಸೇರಿರತಕ್ಕದ್ದು.

7. ಮೋಟಾರು ಪತ್ತಿನ ಸಹಕಾರ ಸಂಘಗಳು ಹಾಗೂ ಪತ್ತಿನ ಸಹಕಾರ ಸಂಘಗಳು ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949 ರ ವ್ಯಾಪ್ತಿಯಲ್ಲಿ ಬಾರದೇ ಇರುವ ಹಾಗೆ ನೋಡಿಕೊಳ್ಳಲು ನೋಂದಣಿ ಅಧಿಕಾರಿಗಳು ಅನುಬಂಧ 1 ಮತ್ತು 2 ರಲ್ಲಿ ನೀಡಿರುವ ನಿಬಂಧನೆಗಳನ್ನು ಸಹ ನೋಂದಣಿಗೆ ಮುನ್ನಾ ಅನುಸರಿಸಬೇಕು.

8. ನೌಕರರ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವಾಗ ಒಂದು ಸಂಸ್ಥೆಗೆ, ಒಂದಕ್ಕೂ ಹೆಚ್ಚು ನೌಕರರ ಸಹಕಾರ ಸಂಘಗಳು ಇರದಂತೆ ನೋಡಿಕೊಳ್ಳಬೇಕು. ಯಾವ ಕಾರಣಕ್ಕೂ ಒಂದು ಸಂಸ್ಥೆಗೆ ಒಂದಕ್ಕೂ ಹೆಚ್ಚಿನ ಸಂಘವನ್ನು ನೋಂದಾಯಿಸಬಾರದು.

9. ನೋಂದಣಾಧಿಕಾರಿಗಳು ನೌಕರರ ಪತ್ತಿನ ಸಹಕಾರ ಸಂಘವನ್ನು ನೋಂದಾಯಿಸುವಾಗ ನಿಜ ಸದಸ್ಯತ್ವವನ್ನು ತಿಳಿಯುವ ಸಲುವಾಗಿ ಇಲಾಖಾಧಿಕಾರಿಗಳಿಂದ ನೀಡಿದ ದೃಢೀಕರಣ ಪತ್ರವನ್ನು ಯದೃಚ್ಛಿಕ ಪದ್ಧತಿ ಪ್ರಕಾರ ಪರಿಶೀಲಿಸಿ ಖಾತರಿ ಮಾಡಿಕೊಳ್ಳಬೇಕು.

10. ನೋಂದಾಯಿಸಬೇಕಾದ ಸಂಘದ ಕಾರ್ಯವ್ಯಾಪ್ತಿ ತಾಲ್ಲೂಕು ಅಥವಾ ಅದಕ್ಕೂ ಹೆಚ್ಚಿನ ವ್ಯಾಪ್ತಿಯನ್ನು ಹೊಂದಿದ್ದಲ್ಲಿ ಆಯಾ ಉಪ ವಿಭಾಗದ ಸಹಾಯಕ ನಿಬಂಧಕರು ಪ್ರಸ್ತಾವೆಗಳನ್ನು

ಅನುಬಂಧ 1 ಮತ್ತು 2 ರಲ್ಲಿ ಸೂಚಿಸಿರುವಂತೆ ಹಾಗೂ ಮೇಲಿನ ಮಾರ್ಗಸೂಚಿಗಳನ್ನು ಸೂಕ್ತವಾಗಿದೆಯೇ ಎಂದು ಪರಿಶೀಲಿಸಿ ಹಿರಿಯ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

ಯಾವುದೇ ಕಾರಣಕ್ಕೂ ಯಾವುದೇ ಅಧಿಕಾರಿಗಳು ಇಂತಹ ಪ್ರಸ್ತಾವೆಗಳನ್ನು ತಮ್ಮಲ್ಲಿ 60 ದಿನಗಳಿಗಿಂತ ಹೆಚ್ಚಿಗೆ ಇಟ್ಟುಕೊಳ್ಳಬಾರದು.

ಈ ಮಾರ್ಗಸೂಚಿ ಮತ್ತು ಷರತ್ತುಗಳನ್ನೊಳಗೊಂಡ, ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ಉಲ್ಲೇಖದಲ್ಲಿ ನಮೂದಿಸಿದ ಹಿಂದಿನ ಸುತ್ತೋಲೆಗಳು ರದ್ದಾಗಿವೆಯೆಂದು ಭಾವಿಸತಕ್ಕದ್ದು.

ಸಹಿ/-

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

ನಂ.ಯುಬಿಸಿ-1/ಯುಎಂಸಿ/99/93-94

## ಅನುಬಂಧ-1

ನಗರ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಮುನ್ನಾ ಪಾಲಿಸಬೇಕಾದ ನಿಬಂಧನೆಗಳು

1. ಆರ್ಥಿಕ ಮಾಹಿತಿ ಮತ್ತು ಇತರೆ ಮಾರ್ಗಸೂಚಿಗಳನ್ನು ಪಾಲಿಸಿದ ನಂತರವೇ ಪ್ರಾರಂಭಿಕ ಷೇರು ಹಣ ಸಂಗ್ರಹಣೆಗಾಗಿ ಮುಖ್ಯ ಪ್ರವರ್ತಕರಿಗೆ ಅನುಮತಿ ನೀಡಬೇಕು.
2. ಸಂಘದ ನಾಮಾಂಕಿತದಲ್ಲಿ ಪತ್ತಿನ ಸಹಕಾರ ಸಂಘವೆಂದು ಸ್ಪಷ್ಟವಾಗಿ ನಮೂದಿಸಿರಬೇಕು.
3. ಸಂಘದ ಕಾರ್ಯವ್ಯಾಪ್ತಿಯನ್ನು ನಿರ್ಧರಿಸುವಾಗ ಯಾವುದೇ ಬಗೆಯ ಆಡಳಿತಾತ್ಮಕ ವಿವಾದಗಳು ಬಾರದಂತೆ ಭೌಗೋಳಿಕ ಪ್ರದೇಶ (ಜಿಯಾಗ್ರಫಿಕಲ್ ಏರಿಯಾ) ವನ್ನು ಸ್ಪಷ್ಟವಾಗಿ ನಮೂದಿಸಿರಬೇಕು.
4. ಸಂಘದ ಸದಸ್ಯತ್ವವು ಕಾರ್ಯಕ್ಷೇತ್ರದ ವ್ಯಾಪ್ತಿಯ ಸರಹದ್ದಿನೊಳಗೆ ಸಾಮಾನ್ಯವಾಗಿ ವಾಸಿಸುತ್ತಿರುವ ನಿವಾಸಿಗಳಿಗೆ ಮಾತ್ರ ಸೀಮಿತವಾಗಿರಬೇಕು.

5. 4ನೇ ನಿಬಂಧನೆಗೆ ಒಳಪಟ್ಟು, ಸದಸ್ಯತ್ವವು ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳನ್ವಯ ಅರ್ಹತೆ ಇರುವ ಎಲ್ಲಾ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು. ಸದಸ್ಯತ್ವವು ಜಾತಿ, ಮತ, ಭಾಷೆ ಹಾಗೂ ಜನಾಂಗದ ಮೇಲೆ ಆಧಾರಿತವಾಗಿರತಕ್ಕದ್ದು. ಸಂಘದ ಸಂಘಟನಾ ಸ್ವರೂಪವು ಸಹಕಾರದ ನೈಜ ಲಕ್ಷಣಗಳನ್ನು ಹೊಂದಿರಬೇಕು.

6. ಸಂಘದ ಸಾಲ ನೀಡಿಕೆ ಮತ್ತು ಠೇವಣಿ ಸ್ವೀಕರಿಸುವ ವ್ಯವಹಾರಗಳು ಸದಸ್ಯರೊಂದಿಗೆ ನಡೆಸುವುದಕ್ಕೆ ಮಾತ್ರ ಸೀಮಿತವಾಗಿರಬೇಕು. ಸದಸ್ಯೇತರರಿಂದ, ಸಾರ್ವಜನಿಕರಿಂದ ಹಾಗೂ ನಾಮಮಾತ್ರ ಸದಸ್ಯರಿಂದ ಠೇವಣಿ ಸ್ವೀಕರಿಸುವುದಕ್ಕೆ ಪೋಟಾ ನಿಯಮಗಳಲ್ಲಿ ಅವಕಾಶವಿರಬಾರದು.

ಎ) ಪೋಟಾ ನಿಯಮಗಳು ಸ್ಪಷ್ಟವಾದ ಅರ್ಥವನ್ನು ಕೊಡುತ್ತಿರಬೇಕು. ಇತರೆ ಮೂಲಗಳಿಂದ (from other sources )ಇತರರಿಂದ (from others)ಹಾಗೂ ಸದಸ್ಯೇತರರಿಂದ (from non members) ಎಂಬ ಶಬ್ದಗಳು ಪೋಟಾ ನಿಯಮಗಳಲ್ಲಿರಬಾರದು.

ಬಿ) ಇತರೆ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವವರು ನೋಂದಣಿ ಮಾಡುವ ಪತ್ತಿನ ಸಂಘದ ಸದಸ್ಯತ್ವಕ್ಕೆ ಅರ್ಹರಲ್ಲವೆಂಬುದನ್ನು ಉಪ ನಿಯಮಗಳಲ್ಲಿ ಅಳವಡಿಸಿರಬೇಕು.

ಸಿ) ಸಂಘದ ಮೂಲಭೂತ ಉದ್ದೇಶಗಳು ಸಂಘದ ಸದಸ್ಯರಿಗೆ ಮಾತ್ರ ಆರ್ಥಿಕ ಸಹಾಯ, ಸಾಲ ಸೌಲಭ್ಯಗಳನ್ನೊದಗಿಸುವ ಏರ್ಪಾಡು ಮಾಡುವುದಾಗಿರಬೇಕು. ಸಂಘದ ಸದಸ್ಯತ್ವವು ಸ್ವಸಹಾಯ ಮತ್ತು ಉಳಿತಾಯ ಮನೋಭಾವನೆಯನ್ನು ವೃದ್ಧಿಸುವುದಕ್ಕೆ ಮಾತ್ರ ಸೀಮಿತವಾಗಿರಬೇಕು.

ಡಿ) ಸಂಘದ ಉಪ ನಿಯಮದಲ್ಲಿ ನಮೂದಿಸುವ ಉದ್ದೇಶಗಳು ಪತ್ತಿನ ವ್ಯವಹಾರಕ್ಕೆ ಮಾತ್ರ ಸೀಮಿತವಾಗಿರತಕ್ಕದ್ದು.

ಇ) ವ್ಯಕ್ತಿಗಳು ಮಾತ್ರ ಸಂಘದ ಸದಸ್ಯತ್ವಕ್ಕೆ ಅರ್ಹರು, ಯಾವುದೇ ಸಂಸ್ಥೆ ನೋಂದಣಿಯಾದ ಇತರೆ ಸಂಘಗಳು, ಅಸೋಷಿಯೇಷನ್ ಗಳು ಸಂಘದ ಸದಸ್ಯತ್ವಕ್ಕೆ ಅರ್ಹರಲ್ಲ.

ಎಫ್) ಸಹಕಾರ ಸಂಘಗಳ ಕಾಯ್ದೆ ಕಲಂ 111(ಎ) ರನ್ವಯ ಸಂಘದ ಉಪ ನಿಯಮಗಳಲ್ಲಿ ವೇತನ ಕಾರ್ಯದರ್ಶಿ ನೇಮಕಾತಿಗೆ ಅವಕಾಶವಿರಬೇಕು.

ಜಿ) ಸದಸ್ಯರಿಗೆ ಸಾಲವನ್ನು ಚೆಕ್ ಮೂಲಕವೇ ನೀಡಲು ಉಪ ನಿಯಮದಲ್ಲಿ ಅವಕಾಶವಿರಬೇಕು.

ಹೆಚ್) ಒಬ್ಬ ಸದಸ್ಯನು ಇಬ್ಬರು ಸಾಲಗಾರರಿಗೆ ಮಾತ್ರ ಜಾಮೀನುದಾರನಾಗಿರಲು ಉಪ ನಿಯಮದಲ್ಲಿ ನಿರ್ಬಂಧವಿರಬೇಕು.

ಐ) ಸಹಕಾರ ಸಂಘಗಳ ನಿಬಂಧಕರು, ಕಾಲ ಕಾಲಕ್ಕೆ ನಿಗದಿಪಡಿಸುವ ನಗದು ಮತ್ತು ದ್ರವ್ಯ ಆಸ್ತಿ ಕಡ್ಡಾಯವಾಗಿಡಲು ಉಪ ನಿಯಮದಲ್ಲಿ ಅವಕಾಶವಿರಬೇಕು.

7. ಸಂಘದ ಆಡಳಿತ ಮಂಡಳಿಯ ಸದಸ್ಯರುಗಳ ಸಂಖ್ಯೆ ಕನಿಷ್ಠ 9 ಕ್ಕಿಂತ ಕಡಿಮೆ ಇರಕೂಡದು. ಅದರಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಹಾಗೂ ಒಂದು ಸ್ಥಾನವನ್ನು ಮಹಿಳೆಯರಿಗೆ ಮೀಸಲಿಡತಕ್ಕದ್ದು.

8. ಸಂಘದ ಪೋಟ ನಿಯಮಗಳು 1949 ರ ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯ್ದೆಗೆ ಅನ್ವಯವಾಗುವಂತೆ ಇರಕೂಡದು. ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳಿಗೆ ಸಂಪೂರ್ಣ ಹೊಂದಿಕೆಯಾಗಿರಬೇಕು. ಪ್ರಸ್ತಾವೆಯೊಂದಿಗೆ ನಿಯೋಜಿತ ಸಂಘದ ಕರಡು ಪೋಟು ನಿಯಮಗಳನ್ನು ಪಡೆದು ಅನುಮತಿ ನೀಡುವ ಮೊದಲೇ ಎಲ್ಲಾ ನಿಯಮಗಳನ್ನು ಪರಿಶೀಲಿಸಬೇಕು.

9. ಉದ್ದೇಶಿತ ಸಂಘದ ನೋಂದಣಿಗೆ ಮುನ್ನ ಅದರ ರಿಜಿಸ್ಟರ್ಡ್ ಕಛೇರಿಗೆ ಸೂಕ್ತವಾಗಿ ಪ್ರತ್ಯೇಕವಾದ ವಸತಿ ಕಟ್ಟಡವನ್ನು ಹೊಂದಿದ್ದು ಅದರ ಸಂಪೂರ್ಣ ವಿಳಾಸವನ್ನು ನೋಂದಣಿ ಅರ್ಜಿ ಜೊತೆ ಸಲ್ಲಿಸಬೇಕು. ಸಂಘದ ಎಲ್ಲಾ ಕಾರ್ಯಕಲಾಪಗಳು, ಚಟುವಟಿಕೆಗಳು ಮತ್ತು ವ್ಯವಹಾರಗಳು ರಿಜಿಸ್ಟರ್ಡ್ ಕಛೇರಿಯಲ್ಲೇ ನಡೆಸಬೇಕು.

10. ನಿಯೋಜಿತ ಸಂಘದ ನೋಂದಣಿಗೆ ಮುನ್ನ, ಇಲಾಖಾಧಿಕಾರಿಗಳು ಮುಖ್ಯ ಪ್ರವರ್ತಕರುಗಳಿಗೆ ಕೆಳಗೆ ನಮೂದಿಸಿರುವಂತೆ ಕನಿಷ್ಟ ಸದಸ್ಯರಿಂದ ಷೇರು ಹಣ ಸಂಗ್ರಹಿಸಿ ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ನಿಯೋಜಿತ ಸಂಘದ ಹೆಸರಿನಲ್ಲಿ ಠೇವಣಿ ಇಡಲು ಆದೇಶಿಸಬೇಕು. ನಿಯೋಜಿತ ಸಂಘದ ಸದಸ್ಯರಲ್ಲಿ ಕನಿಷ್ಟ ಶೇಕಡ 10 ಸದಸ್ಯರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿರಬೇಕು.

| **ಕ್ರಸಂ** | | **ಕನಿಷ್ಟ ಸದಸ್ಯತ್ವ** | **ಕನಿಷ್ಟ ಪ್ರಾರಂಭಿಕ ಷೇರು ಹಣ ಸಂಗ್ರಹಿಸುವುದು** |
|---|---|---|---|
| 1 | ನಗರ, ನಗರಾಭಿವೃದ್ಧಿ ಪ್ರದೇಶ:<br>(ಜನಸಂಖ್ಯೆ 10 ಲಕ್ಷಕ್ಕಿಂತ ಹೆಚ್ಚಿಗೆ) | 500 | ರೂ.5.00 ಲಕ್ಷ |
| 2 | ನಗರ ಪ್ರದೇಶಗಳು:<br>(1 ಲಕ್ಷದಿಂದ 10 ಲಕ್ಷ ಜನಸಂಖ್ಯೆ) | 400 | ರೂ.4.00 ಲಕ್ಷ |

| | | | |
|---|---|---|---|
| 3 | ಅರೆನಗರ ಪ್ರದೇಶಗಳು:<br>(5 ಸಾವಿರ ಮೇಲ್ಪಟ್ಟು) | 300 | ರೂ.3.00 ಲಕ್ಷ |

11. ಮಹಿಳಾ ಪತ್ತಿನ ಸಹಕಾರ ಸಂಘ ಮತ್ತು ಪರಿಶೀಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವಾಗ ಕ್ರಮ ಸಂಖ್ಯೆ 10 ರಲ್ಲಿ ನಮೂದಿಸಿರುವ ಮೊಬಲಗಿನ ಶೇಕಡ 50 ರಷ್ಟು ಪ್ರಾರಂಭಿಕ ಶೇರು ಹಣವನ್ನು ಸಂಗ್ರಹಿಸಲು ಶೇ.75 ರಷ್ಟು ಸದಸ್ಯತ್ವನ್ನು ಹೊಂದಲು ಮುಖ್ಯ ಪ್ರವರ್ತಕರಿಗೆ ಅನುಮತಿ ನೀಡಬಹುದಾಗಿದೆ ಆದರೆ ಸಬಲತೆಯನ್ನು ಹೊಂದುವ ದೃಷ್ಟಿಯಿಂದ, ಪೂರ್ಣ ಶೇರುಧನ ಹಾಗೂ ಸದಸ್ಯತ್ವವನ್ನು ಒಂದು ವರ್ಷದಲ್ಲಿ ತಲುಪಬೇಕೆಂದು ಕರಾರನ್ನು ಹಾಕತಕ್ಕದ್ದು. ಮಹಿಳಾ ಸಹಕಾರ ಪತ್ತಿನ ಸಂಘದಲ್ಲಿ ಮಹಿಳೆಯರೇ ಸದಸ್ಯತ್ವವನ್ನು ಹೊಂದಿರತಕ್ಕದ್ದು. ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪತ್ತಿನ ಸಹಕಾರ ಸಂಘದಲ್ಲಿ, ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವ್ಯಕ್ತಿಗಳೇ ಸದಸ್ಯರಾಗಿರುವಂತೆ ಉಪ ನಿಯಮಗಳಲ್ಲಿ ಅಳವಡಿಸತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

ನಂ.ಯುಬಿಸಿ–1/ಯುಎಂಸಿ/99/93–94

**ಅನುಬಂಧ–2**

ನೌಕರರ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಮುನ್ನಾ ಪಾಲಿಸಬೇಕಾದ ನಿಬಂಧನೆಗಳು

1. ಸಂಘದ ನಾಮಾಂಕಿತದಲ್ಲಿ "ನೌಕರರ ಪತ್ತಿನ ಸಹಕಾರ ಸಂಘ ಎಂದು ಸ್ಪಷ್ಟವಾಗಿ ನಮೂದಿಸಲ್ಪಟ್ಟಿರಬೇಕು, ಹಾಗೆ ಒಂದು ಇಲಾಖೆ ಅಥವಾ ಕಾರ್ಯಸಂಸ್ಥೆಗೆ (establishment) ಒಂದೇ ಸಂಘವಿರತಕ್ಕದ್ದು.
2. ಸಂಘದ ಕಾರ್ಯಕ್ಷೇತ್ರ ವ್ಯಾಪ್ತಿಯನ್ನು ನಿರ್ಧರಿಸುವಲ್ಲಿ ಯಾವುದೇ ಬಗೆಯ ಆಡಳಿತಾತ್ಮಕ ವಿವಾದಗಳಿಗೆ ಎಡೆಮಾಡಿಕೊಡದಂತೆ ಕಾರ್ಯಕ್ಷೇತ್ರದಲ್ಲಿ ಭೌಗೋಳಿಕ ಪ್ರದೇಶ (ಜಿಯಾಗ್ರಾಫಿಕಲ್ ಏರಿಯಾ)ವನ್ನು ಸ್ಪಷ್ಟವಾಗಿ ನಮೂದಿಸಲ್ಪಟ್ಟಿರಬೇಕು.
3. ಸದಸ್ಯತ್ವವು ಸಂಘದ ಕಾರ್ಯಕ್ಷೇತ್ರದ ವ್ಯಾಪ್ತಿಯ ಸರಹದ್ದಿನೊಳಗೆ ಸಾಮಾನ್ಯವಾಗಿ ವಾಸಿಸುತ್ತಿರುವ ಮತ್ತು ಆಯಾ ಸಂಸ್ಥೆ, ಇಲಾಖೆಯಲ್ಲಿಯ ಖಾಯಂ ನೌಕರರಿಗೆ ಮಾತ್ರ ಸೀಮಿತವಾಗಿರತಕ್ಕದ್ದು.
4. ಮೇಲ್ಕಂಡ 3ನೇ ಷರತ್ತಿಗೊಳಪಟ್ಟು, ಸದಸ್ಯತ್ವವು ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳನ್ವಯ ಅರ್ಹತೆ ಇರುವ ಎಲ್ಲಾ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು. ಸದಸ್ಯತ್ವವು ಜಾತಿ, ಮತ, ಪಂಥ, ಜನಾಂಗ ಹಾಗೂ ಭಾಷೆ ಇವುಗಳ ಮೇಲೆ ಆಧಾರಿತವಾಗಿರಬಾರದು. ಸಂಘದ ಸಂಘಟನಾ ಸ್ವರೂಪವು ಸಹಕಾರದ ನೈಜ ಲಕ್ಷಣಗಳನ್ನು ಹೊಂದಿರತಕ್ಕದ್ದು.
5. ಇತರೆ ಪತ್ತಿನ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವವರು ನೋಂದಣಿ ಮಾಡುವ ನೌಕರರ ಪತ್ತಿನ ಸಂಘದ ಸದಸ್ಯತ್ವಕ್ಕೆ ಅರ್ಹರಲ್ಲ.
6. ಸಂಘದ ಸಾಲ ನೀಡಿಕೆ ಮತ್ತು ಠೇವಣಿ ಸ್ವೀಕಾರ ವ್ಯವಹಾರಗಳು ಸದಸ್ಯರೊಂದಿಗೆ ನಡೆಸುವುದಕ್ಕೆ ಮಾತ್ರ ಸೀಮಿತವಾಗಿರಬೇಕು. ಸಂಘದ ಪೋಟಾ ನಿಯಮಗಳಲ್ಲಿ ಸದಸ್ಯೇತರರಿಂದ, ಸಾರ್ವಜನಿಕರಿಂದ ಹಾಗೂ ನಾಮಮಾತ್ರ ಸದಸ್ಯರಿಂದಲೂ ಸಹ ಠೇವಣಿ ಸ್ವೀಕರಿಸುವುದಕ್ಕೆ ಅವಕಾಶವಿರಕೂಡದು.
7. ಪೋಟಾ ನಿಯಮಗಳು ಸ್ಪಷ್ಟವಾದ ಅರ್ಥವನ್ನು ಕೊಡುತ್ತಿರಬೇಕು. ಉದಾ:– ಇತರೆ ಮೂಲಗಳಿಂದ (from other sources) (from others)ಹಾಗೂ ಸದಸ್ಯೇತರರಿಂದ (from non member) ಎಂಬ ಶಬ್ದಗಳು ಪೋಟಾ ನಿಯಮಗಳಲ್ಲಿರಬಾರದು.

ಎ) ಸಂಘದ ಮೂಲಭೂತ ಉದ್ದೇಶಗಳು ಸಂಘದ ಸದಸ್ಯರಿಗೆ ಮಾತ್ರ ಆರ್ಥಿಕ ಸಹಾಯ, ಸಾಲ ಸೌಲಭ್ಯಗಳನ್ನೊದಗಿಸುವ ಏರ್ಪಾಡು ಮಾಡುವುದಾಗಿರಬೇಕು. ಸಂಘದ ಸದಸ್ಯತ್ವವು ಸ್ವಸಹಾಯ ಮತ್ತು ಉಳಿತಾಯ ಮನೋಭಾವನೆಯನ್ನು ವೃದ್ಧಿಸುವುದಕ್ಕೆ ಮಾತ್ರ ಸೀಮಿತವಾಗಿರಬೇಕು.

ಬಿ) ವ್ಯಕ್ತಿಗಳು ಮಾತ್ರ ಸಂಘದ ಸದಸ್ಯತ್ವಕ್ಕೆ ಅರ್ಹರು, ಯಾವುದೇ ಸಂಸ್ಥೆ ನೋಂದಣಿಯಾದ ಇತರೆ ಸಂಘಗಳು, ಟ್ರಸ್ಟ್, ಫರ್ಮ್, ಕಂಪನಿ, ಸಹಕಾರ ಸಂಘ ಹಾಗೂ ಅಸೋಷಿಯೇಷನ್ ಗಳು ಸಂಘದ ಸದಸ್ಯತ್ವಕ್ಕೆ ಅರ್ಹರಲ್ಲ.

ಸಿ) ಸಂಘದ ಆಡಳಿತ ಮಂಡಳಿಯ ಸದಸ್ಯರುಗಳ ಸಂಖ್ಯೆ ಕನಿಷ್ಟ 9 ಕ್ಕಿಂತ ಕಡಿಮೆ ಇರಕೂಡದು. ಅದರಲ್ಲಿ ಕನಿಷ್ಟ ಒಂದು ಸ್ಥಾನವನ್ನು ಮಹಿಳೆಯರಿಗಾಗಿ ಹಾಗೂ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಿಡತಕ್ಕದ್ದು.

ಡಿ) ಸಂಘದ ಪೋಟ ನಿಯಮಗಳು 1949 ರ ಬ್ಯಾಂಕಿಂಗ್ ರೆಗ್ಯೂಲೇಷನ್ ಕಾಯ್ದೆಗೆ ಅನ್ವಯವಾಗುವಂತೆ ಇರಕೂಡದು. ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳಿಗೆ ಸಂಪೂರ್ಣ ಹೊಂದಿಕೆಯಾಗಿರಬೇಕು.

ಇ) ಸಹಕಾರ ಸಂಘಗಳ ಕಾಯ್ದೆ ಕಲಂ 111(ಎ) ರನ್ವಯ ವೇತನ ಕಾರ್ಯದರ್ಶಿ ನೇಮಕಾತಿಗೆ ಪೋಟಾ ನಿಯಮದಲ್ಲಿ ಅವಕಾಶವಿರಬೇಕು.

ಎಫ್) ಸಂಘದ ಸಾಲ ವಸೂಲಾತಿಯು ಸುಗಮವಾಗಿ ನಡೆಯಲು ಸಹಕಾರ ಸಂಘಗಳ ಕಾಯ್ದೆ ಕಲಂ 34 ರನ್ವಯ ಮುಚ್ಚಳಿಕೆ ಪತ್ರ (under taking/agreement) ವನ್ನು ಅರ್ಜಿಯ ಜೊತೆಗೆ ಪಡೆಯಲು ಪೋಟಾ ನಿಯಮಗಳಲ್ಲಿ ಅವಕಾಶವಿರಬೇಕು.

8. ಸಂಘದ ನೋಂದಣಿಗಾಗಿ ಆಯಾ ಸಂಸ್ಥೆ, ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಕನಿಷ್ಟ ಅರ್ಧದಷ್ಟು (ಶೇ.50 ರಷ್ಟು) ನೌಕರರು ನಿಯೋಜಿತ ಸಂಘದ ಸದಸ್ಯರಾಗಲು ಸಮ್ಮತಿಸಿರಬೇಕು. ಇಂತಹ ಸದಸ್ಯರ ಸಂಖ್ಯೆ 50 ಕ್ಕಿಂತ ಕಡಿಮೆಯಾಗಿರಕೂಡದು. ನಿಯೋಜಿತ ಸಂಘದ ಮುಖ್ಯ ಪ್ರವರ್ತಕರು ಸಂಘದ ನೋಂದಣಿಯ ಮುನ್ನ ನೋಂದಣಿ ಅಧಿಕಾರಿಗಳ ಪೂರ್ವಾನುಮತಿ ಪಡೆದು ರೂ. 25,000/–ಗಳ ಕನಿಷ್ಟ ಪ್ರಾರಂಭಿಕ ಷೇರು ಹಣವನ್ನು ಸಂಗ್ರಹಿಸಿ ಅದನ್ನು ಸಂಬಂಧಪಟ್ಟ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ನಿಯೋಜಿತ ಸಂಘದ ಹೆಸರಿನಲ್ಲಿ ಠೇವಣಿ ಮಾಡಬೇಕು. ಪ್ರಾರಂಭಿಕ ಷೇರು ಯಾವುದೇ

ಸಂದರ್ಭದಲ್ಲಿ ರೂ. 25,000/–ಕ್ಕಿಂತ ಕಡಿಮೆಯಾಗಿರಕೂಡದು. ಹಾಗೂ ಪ್ರಾರಂಭಿಕ ಸದಸ್ಯರ ಸಂಖ್ಯೆ 50 ಕ್ಕೆ ಹೆಚ್ಚಿದಲ್ಲಿ ಪ್ರಾರಂಭಿಕ ಷೇರು ಸಂಗ್ರಹಣೆಯ ಮೊತ್ತ ಪ್ರತ್ಯೇಕವಾಗಿ ಹೆಚ್ಚಿಗೆ ನಿಯೋಜಿಸತಕ್ಕದ್ದು.

9. ಸಂಘದ ನೋಂದಣಿಗಾಗಿ ಪ್ರವರ್ತಕರು, ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರಿಂದ, ಇಲಾಖಾಧಿಕಾರಿಗಳಿಂದ ಅನುಮತಿ ಪಡೆದಿರಬೇಕು, ಹಾಗೂ ಸಂಘದ ಕಛೇರಿಗೆ ಸೂಕ್ತವಾದ ಪ್ರತ್ಯೇಕವಾದ ವಸತಿ (ಕಟ್ಟಡ)ಯನ್ನು ಹೊಂದಿದ್ದು ಅದರ ಸಂಪೂರ್ಣ ವಿಳಾಸವನ್ನು ನೋಂದಣಿ ಅರ್ಜಿಯ ಜೊತೆ ಸಲ್ಲಿಸಬೇಕು. ಸಂಘದ ಎಲ್ಲಾ ಕಾರ್ಯಕಲಾಪಗಳು, ಚಟುವಟಿಕೆಗಳು ಮತ್ತು ವ್ಯವಹಾರಗಳು ರಿಜಿಸ್ಟರ್ಡ್ ಕಛೇರಿಯಲ್ಲೇ ನಡೆಸಬೇಕು.

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**

(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052**

ನಂ.ಯುಬಿಸಿ/ಯುಬಿಎ/(2)7/95–96 ದಿನಾಂಕ 14–3–1996

**:: ಸುತ್ತೋಲೆ –54 ::**

ವಿಷಯ:– ಅಲ್ಪಸಂಖ್ಯಾತರ ಪತ್ತಿನ ಸಹಕಾರ ಸಂಘಗಳ ನೋಂದಣಿಗೆ ಷೇರುವಂತಿಗೆ ಸಂಗ್ರಹಿಸುವಲ್ಲಿ ರಿಯಾಯಿತಿ ಕುರಿತು.

ಉಲ್ಲೇಖ:– ಈ ಕಛೇರಿಯ ದಿ:2–2–1994 ರ ಸುತ್ತೋಲೆ ಕ್ರ.ಸಂ.19.

---

ನಗರ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವ ಬಗ್ಗೆ ಉಲ್ಲೇಖದ ಈ ಕಛೇರಿಯ ದಿ:2–2–1994 ರಲ್ಲಿ ಸುತ್ತೋಲೆ ಹೊರಡಿಸಲಾಗಿತ್ತು. ಸದರಿ ಸುತ್ತೋಲೆಯಲ್ಲಿ ಅರೆ ಪಟ್ಟಣ ಪ್ರದೇಶಗಳಲ್ಲಿ (5ಸಾವಿರಕ್ಕೆ ಮೇಲ್ಪಟ್ಟು ಜನಸಂಖ್ಯೆ ಇರುವ ಕಡೆ) ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವಲ್ಲಿ ಕಂಡಿಕೆ 10 ರಲ್ಲಿ ಈ ಕೆಳಕಂಡಂತೆ ಷೇರು ಹಣ ಸಂಗ್ರಹಣೆ ಮತ್ತು ಸದಸ್ಯತ್ವದ ಬಗ್ಗೆ ಸೂಚನೆ ನೀಡಲಾಗಿತ್ತು.

| ಕ್ರ.ಸಂ | | ಕನಿಷ್ಟ ಸದಸ್ಯತ್ವ | ಕನಿಷ್ಟ ಪ್ರಾರಂಭಿಕ ಷೇರು ಹಣ ಸಂಗ್ರಹಿಸುವುದು |
|---|---|---|---|
| 1 | ನಗರ, ನಗರಾಭಿವೃದ್ಧಿ ಪ್ರದೇಶ: (ಜನಸಂಖ್ಯೆ 10 ಲಕ್ಷಕ್ಕಿಂತ ಹೆಚ್ಚಿಗೆ) | 500 | ರೂ.5.00 ಲಕ್ಷ |
| 2 | ನಗರ ಪ್ರದೇಶಗಳು: (1 ಲಕ್ಷದಿಂದ 10 ಲಕ್ಷ ಜನಸಂಖ್ಯೆ) | 400 | ರೂ.4.00 ಲಕ್ಷ |
| 3 | ಅರೆನಗರ ಪ್ರದೇಶಗಳು: (5 ಸಾವಿರ ಮೇಲ್ಪಟ್ಟು) | 300 | ರೂ.3.00 ಲಕ್ಷ |

ಇದೇ ಸುತ್ತೋಲೆ ಕಂಡಿಕೆ 11 ರಲ್ಲಿ ಮಹಿಳಾ ಪತ್ತಿನ ಸಹಕಾರ ಸಂಘ ಮತ್ತು ಪರಿಶೀಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವಾಗ ಸಬಲತೆಯನ್ನು ಹೊಂದುವ ದೃಷ್ಟಿಯಿಂದ ಈ ಕೆಳಕಂಡಂತೆ ರಿಯಾಯಿತಿಯನ್ನು ತೋರಿಸಲಾಗಿತ್ತು.

“ಮಹಿಳಾ ಪತ್ತಿನ ಸಹಕಾರ ಸಂಘ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪತ್ತಿನ ಸಹಕಾರ ಸಂಘಗಳನ್ನು ನೋಂದಣಿ ಮಾಡುವಾಗ ಕ್ರಮ ಸಂಖ್ಯೆ 10 ರಲ್ಲಿ ನಮೂದಿಸಿರುವ ಮೊಬಲಗಿನ ಶೇಕಡ 50 ರಷ್ಟು ಪ್ರಾರಂಭಿಕ ಶೇರು ಹಣವನ್ನು ಸಂಗ್ರಹಿಸಲು ಶೇ.75 ರಷ್ಟು ಸದಸ್ಯತ್ವವನ್ನು ಹೊಂದಲು ಮುಖ್ಯ ಪ್ರವರ್ತಕರಿಗೆ ಅನುಮತಿ ನೀಡಬಹುದಾಗಿದೆ ಆದರೆ ಸಬಲತೆಯನ್ನು ಹೊಂದುವ ದೃಷ್ಟಿಯಿಂದ, ಪೂರ್ಣ ಶೇರುಧನ ಹಾಗೂ ಸದಸ್ಯತ್ವವನ್ನು ಒಂದು ವರ್ಷದಲ್ಲಿ ತಲುಪಬೇಕೆಂದು ಕರಾರನ್ನು ಹಾಕತಕ್ಕದ್ದು. ಮಹಿಳಾ ಸಹಕಾರ ಪತ್ತಿನ ಸಂಘದಲ್ಲಿ ಮಹಿಳೆಯರೇ ಸದಸ್ಯತ್ವವನ್ನು ಹೊಂದಿರತಕ್ಕದ್ದು, ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪತ್ತಿನ ಸಹಕಾರ ಸಂಘದಲ್ಲಿ, ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವ್ಯಕ್ತಿಗಳೇ ಸದಸ್ಯರಾಗಿರುವಂತೆ ಉಪ ನಿಯಮಗಳಲ್ಲಿ ಅಳವಡಿಸತಕ್ಕದ್ದು.

ಅಲ್ಪಸಂಖ್ಯಾತರ ಪಟ್ಟಣ ಪತ್ತಿನ ಸಹಕಾರ ಸಂಘಗಳನ್ನು ಸಂಗ್ರಹಿಸಲು ಮೇಲಿನ ರಿಯಾಯಿತಿ ವಿಸ್ತರಿಸಬೇಕೆಂದು ಇರುವ ಬೇಡಿಕೆಯನ್ನು ಪರಿಗಣಿಸಲಾಗಿದೆ. ಅಲ್ಪಸಂಖ್ಯಾತರ ಪಟ್ಟಣ ಪತ್ತಿನ ಸಹಕಾರ ಸಂಘಗಳನ್ನು ಸಂಘಟಿಸಲು ಉದ್ದೇಶಿಸಿರುವುದರಿಂದ ಹಾಗೂ ಹೆಚ್ಚಿನ ಜನ ಮತ್ತು ಹಣ ಕೂಡಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುವುದರಿಂದ ಈ ಕಛೇರಿಯ ದಿ:2–2–1994 ರ ಸುತ್ತೋಲೆಯ ಕಂಡಿಕೆ 11 ರ ರಿಯಾಯಿತಿಯನ್ನು ವಿಶೇಷ ಪರಿಸ್ಥಿತಿಯೆಂದು ಪರಿಗಣಿಸಿ ಅಲ್ಪಸಂಖ್ಯಾತರ ಪಟ್ಟಣ ಪತ್ತಿನ ಸಹಕಾರ ಸಂಘಗಳಿಗೂ ವಿಸ್ತರಿಸಲಾಗಿದೆ.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

<u>**ಕರ್ನಾಟಕ ಸರ್ಕಾರ**</u>

(ಸಹಕಾರ ಇಲಾಖೆ)

<u>**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052**</u>

ನಂ.ಯುಬಿಸಿ/ಯುಇಎಸ್/104/93–94 ದಿನಾಂಕ 30–08–1993

<u>**:: ಸುತ್ತೋಲೆ –5 ::**</u>

ವಿಷಯ:–ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳಡಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಪ್ರಸ್ತಾವೆಗಳನ್ನು ಪರಿಗಣಿಸಲು ಬೇಕಾಗುವ ಮಾಹಿತಿ ಬಗ್ಗೆ.

ಉಲ್ಲೇಖ:–ಈ ಕಛೇರಿಯ ಸುತ್ತೋಲೆ ಸಂಖ್ಯೆ: ಯುಬಿಸಿ:ಯುಇಎಸ್:28:91–92 ದಿ:13–2–92.

---

ಕರ್ನಾಟಕ ರಾಜ್ಯದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರ ಸಂಘಗಳು ಕಳೆದ ಕೆಲವು ವರ್ಷಗಳಿಂದ ಆರ್ಥಿಕವಾಗಿ ಅಭಿವೃದ್ಧಿ ಹೊಂದಿ ತನ್ನ ಸದಸ್ಯರಿಗೆ ಹೆಚ್ಚಿನ ಸಾಲ ಸವಲತ್ತುಗಳನ್ನು ನೀಡುತ್ತಿರುವುದು ಕಂಡು ಬಂದಿದೆ. ಈ ಸಂಸ್ಥೆಗಳು ತಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಹಲವಾರು ಸಲ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಮತ್ತು ಸಮಯ ಸಮಯಕ್ಕೆ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳ ಪ್ರಕಾರ ಅನುಮತಿಯನ್ನು ಅಥವಾ ಮಂಜೂರಾತಿಯನ್ನು ಪಡೆಯುವ ಅವಶ್ಯಕತೆಯಿರುತ್ತದೆ. ಇಂತಹ ಪ್ರಸ್ತಾವೆಗಳನ್ನು ಇಲಾಖೆಯು ಇತ್ಯರ್ಥಪಡಿಸುವಲ್ಲಿ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆಂಬ ದೂರುಗಳು ಇವೆ. ಅಲ್ಲದೆ ಇಂತಹ ಪ್ರಸ್ತಾವೆಗಳನ್ನು ತಯಾರು ಮಾಡುವಾಗ ಅನೇಕ ಸಲ ಮಾಹಿತಿಯ ಅಭಾವ ಕಂಡುಬಂದು ಹೆಚ್ಚಿನ ಪತ್ರವ್ಯವಹಾರಗಳನ್ನು ಮಾಡುತ್ತಿದ್ದೇವೆ. ಪ್ರಸ್ತಾವೆಯನ್ನು ಇಲಾಖೆಯು ಪರಿಶೀಲಿಸಿ ಹೆಚ್ಚಿನ ಸಮಯ ತೆಗೆದುಕೊಳ್ಳದೆ ಅನುಮತಿ ಅಥವಾ ಮಂಜೂರಾತಿ ನೀಡಬೇಕಾದಲ್ಲಿ ಪ್ರತಿಯೊಂದು ಪ್ರಸ್ತಾವೆಗಳಿಗಾಗಿ ಯಾವ ಯಾವ ಮಾಹಿತಿ ಅವಶ್ಯವಿದೆ ಎಂಬ ಬಗ್ಗೆ ಗೊತ್ತುಪಡಿಸುವುದು ಸೂಕ್ತವಾಗುತ್ತದೆ. ಅದೇ ಸಮಯಕ್ಕೆ ಪ್ರಸ್ತಾವೆಗಳನ್ನು ಕಳುಹಿಸುವ ಕಛೇರಿಯ ಹಂತಗಳನ್ನು (ಋಡಿಠಿಣಾಝ ಠಿಡಿಠಿಜಡಿ ಛಿಚಿಟಿಟಿಜಟ) ಸಹ ಕಡಿಮೆ ಮಾಡುವುದು ಅವಶ್ಯವೆಂದು ಕಂಡುಬಂದಿದೆ.

ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಪತ್ತಿನ ಸಹಕಾರ ಸಂಘಗಳು ಕಳುಹಿಸುವ ಪ್ರಸ್ತಾವನೆಗಳಲ್ಲಿ ಈ ಕೆಳಕಂಡ ಮಾಹಿತಿಗಳು ಇರುವುದು ಅತೀ ಅವಶ್ಯಕ್.

1. ಸದಸ್ಯರಿಗೆ ಕರ್ನಾಟಕ ಸಹಕಾರ ಸಂಘಗಳ ನಿಯಮ 22 ರನ್ವಯ ಲಾಭಾಂಶ ಹಂಚುವ ಪ್ರಸ್ತಾವ.

ಅ) ಆ ವರ್ಷದ ಆಡಿಟ್ ಆದ ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಯ ಪ್ರತಿ

ಆ) ಲಾಭ ವಿಂಗಡಣೆಗೆ ಆಡಳಿತಮಂಡಳಿಯು ಶಿಫಾರಸ್ಸು ಮಾಡಿದ ನಡವಳಿಯ ಪ್ರತಿ ಅಥವಾ ವಾರ್ಷಿಕ ವರದಿಯ ಪುಸ್ತಕ.

ಇ) ವಾರ್ಷಿಕ ಮಹಾಸಭೆಯು ಲಾಭವಿಂಗಡಣೆಗೆ ಒಪ್ಪಿಗೆ ಸೂಚಿಸಿರುವ ಮತ್ತು ನಿಬಂಧಕರ ಅನುಮತಿಯನ್ನು ಕೇಳಿರುವ ನಡವಳಿಕೆಯ ಪ್ರತಿ.

ಈ) ಸಂಸ್ಥೆಯ ಉಪ ನಿಯಮಗಳನ್ನು ಲಾಭವಿಂಗಡಣೆಗಾಗಿ ಇರುವ ನಿಯಮದ ಯಥಾ ಪ್ರತಿ.

ಉ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 57(4)(ಬಿ) ರನ್ವಯ ಹಾಗೂ ಉಪನಿಯಮದನ್ವಯ ಶಿಕ್ಷಣ ನಿಧಿಯನ್ನು ಕರ್ನಾಟಕ ಸಹಕಾರ ಮಹಾಮಂಡಳಿಗೆ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ ನಿಧಿಯನ್ನು ಪಾವತಿಸಿದ ರಸೀತಿಯ ಪ್ರತಿ.

ಊ) ಭಾರತೀಯ ರಿಸವ್ ೯ ಬ್ಯಾಂಕಿನ ಸುತ್ತೋಲೆಯಂತೆ ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಕರಡು ನಿಧಿಯನ್ನು ತೆಗೆದಿರಿಸುವ ಬಗ್ಗೆ ದೃಢೀಕರಣ ಪತ್ರ.

2. ಕಾಯ್ದೆ ಕಲಂ 58(ಡಿ) ರನ್ವಯ ಇತರೆ ಬ್ಯಾಂಕುಗಳಲ್ಲಿ ಖಾತೆ ತೆರೆಯಲು ಅಥವಾ ಹಣವನ್ನು ತೊಡಗಿಸಲು ಅನುಮತಿ ಕುರಿತು ಪ್ರಸ್ತಾವೆ.

ಅ) ಸಂಸ್ಥೆಯ ಇತ್ತೀಚಿನ ಅಂದರೆ ಹಿಂದಿನ ತಿಂಗಳ ಅಂತ್ಯಕ್ಕೆ ಇದ್ದಂತೆ ಆರ್ಥಿಕ ತಃಖ್ತೆಗಳು.

ಆ) ವಾಣಿಜ್ಯ ಬ್ಯಾಂಕುಗಳಲ್ಲಿ ಖಾತೆ ತೆರೆಯಲು ಅಥವಾ ಹಣ ತೊಡಗಿಸಲು ಅಂಗೀಕರಿಸಿರುವ ಸಂಸ್ಥೆಯ ಆಡಳಿತಮಂಡಳಿಯ ನಡವಳಿಕೆಯ ಪ್ರತಿ.(ನಡವಳಿಕೆಯು ಸ್ಪಷ್ಟವಾಗಿದ್ದು ಬೇರೆ ಬ್ಯಾಂಕುಗಳಲ್ಲಿ ಹಣ ತೊಡಗಿಸುವುದಕ್ಕೆ ನಿರ್ದಿಷ್ಟ ಕಾರಣಗಳನ್ನು ನಮೂದಿಸಿರತಕ್ಕದ್ದು)

ಇ) ವಾಣಿಜ್ಯ ಬ್ಯಾಂಕುಗಳಲ್ಲಿ ಹಣ ತೊಡಗಿಸುವ ಕನಿಷ್ಟ ಮತ್ತು ಗರಿಷ್ಠ ಮಿತಿ ಮತ್ತು ಅವಧಿ

ಈ) ಈ ಹಿಂದೆ ಅನುಮತಿ ನೀಡಿದ ಆದೇಶದ ಪ್ರತಿ.

ಉ) ಸಂಸ್ಥೆಯಲ್ಲಿ ಹೆಚ್ಚಿನ ಬಂಡವಾಳ ಉಳಿದಿರುವುದಕ್ಕೆ ಸ್ಪಷ್ಟೀಕರಣ.

3. ಕರ್ನಾಟಕ ಸಹಕಾರ ಸಂಘಗಳ ನಿಯಮ 17 ರನ್ವಯ ಸಿಬ್ಬಂದಿ ವೃಂದಬಲ ಮತ್ತು ವೇತನಶ್ರೇಣಿ ಪರಿಷ್ಕರಣೆ ಕುರಿತು ಪ್ರಸ್ತಾವೆ.

ಅ) ಆಡಳಿತಮಂಡಳಿಯ ಠರಾವು (ಹುದ್ದೆಗಳ ಸಂಖ್ಯೆ, ವೇತನ ಶ್ರೇಣಿ ಮತ್ತು ಇತರೆ ಭತ್ಯೆಗಳೊಂದಿಗೆ ವಿವರಣೆ.

ಆ) ಹಾಲಿ ಇರುವ ಸಿಬ್ಬಂದಿಗಳ ವೃಂದಬಲ ಮತ್ತು ಕೋರಿರುವ ಸಿಬ್ಬಂದಿ ವೃಂದಬಲ (ಶಾಖೆ ಇದ್ದಲ್ಲಿ ಶಾಖಾವಾರು ಹುದ್ದೆ ಮತ್ತು ಸಂಖ್ಯೆ ವಿವರವಾಗಿ)

ಇ) ಹಾಲಿ ಇರುವ ಸಿಬ್ಬಂದಿಗಳಿಗೆ ಮತ್ತು ಕೋರುವ ಹುದ್ದೆಗಳಿಗೆ ತಗಲುವ ಸಿಬ್ಬಂದಿ ವೆಚ್ಚ, ದುಡಿಯುವ ಬಂಡವಾಳಕ್ಕೆ ಶೇಕಡಾವಾರು ಪ್ರಮಾಣ. (ಮೂಲವೇತನ, ಡಿ.ಎ, ಹೆಚ್. ಆರ್.ಎ., ಸಿ.ಸಿ.ಎ ಮತ್ತು ಇತರೆ ಭತ್ಯೆಗಳು ಸ್ಪಷ್ಟವಾಗಿರಬೇಕು).

ಈ) ಹಿಂದೆ ಮಂಜೂರಾದ ಹುದ್ದೆಗಳ ಆದೇಶ ಪ್ರತಿ ಮತ್ತು ವೇತನ ಪರಿಷ್ಕರಣೆಯ ಆದೇಶದ ಪ್ರತಿ.

ಉ) ಕೋರುವ ಹೊಸ ಹುದ್ದೆಗಳಿಗೆ ಸಮರ್ಥನೆ. (ಕೆಲಸ ಹಂಚಿಕೆ ಮಾಡಿರುವ ಬಗ್ಗೆ)

ಊ) ಹಾಲಿ ಇರುವ ಸಿಬ್ಬಂದಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ನೌಕರರುಗಳ ಸಂಖ್ಯೆಲ.

ಋ) ಸಂಸ್ಥೆಯ ಕಾರ್ಯಕ್ಷೇತ್ರವನ್ನು ತಿಳಿಸುವ ಉಪ ನಿಯಮದ ಯಥಾ ಪ್ರತಿ

ಋ ) ಅಸ್ಥಿತ್ವದಲ್ಲಿರುವ ಆಡಳಿತಮಂಡಳಿಗೆ ನಡೆದ ಚುನಾವಣಾ ದಿನಾಂಕ ಮತ್ತು ಅವಧಿ

ಎ) ಕಳೆದ 3 ವರ್ಷಗಳ ಆಡಿಟ್ಟಾದ ಹಣಕಾಸು ತಃಖ್ತೆಗಳು ಹಾಗೂ ಹಾಲಿ ಅವಧಿಯ ತಾತ್ಕಾಲಿಕ ಹಣಕಾಸು ತಃಖ್ತೆಗಳು (ಲಾಭಾ ಹಾನಿ, ಆಸ್ತಿ– ಜವಾಬ್ದಾರಿ ತಃಖ್ತೆ)

<u>ವೇತನ ಪರಿಷ್ಕರಣೆಗಾಗಿ ಮೇಲ್ಕಂಡ ಮಾಹಿತಿಗಳೊಂದಿಗೆ ಕೆಳಗಿನ ಮಾಹಿತಿಗಳನ್ನು ಸಹ ಸಲ್ಲಿಸುವುದು.</u>

ಎ) ಪ್ರತಿಯೊಬ್ಬ ಸಿಬ್ಬಂದಿಯು ಹಾಲಿ ಪಡೆಯುತ್ತಿರುವ ವೇತನ ಮತ್ತು ಎಲ್ಲಾ ಭತ್ಯೆಗಳು ಮತ್ತು ಪರಿಷ್ಕರಣದ ನಂತರ ಪಡೆಯಬಹುದಾದ ವೇತನ ಮತ್ತು ಭತ್ಯೆಗಳು, ಇದರಿಂದ ಪ್ರತಿಯೊಬ್ಬ ಸಿಬ್ಬಂದಿಯು ಪಡೆಯಬಹುದಾದ ಹೆಚ್ಚಿನ ಸಂಬಳ ವ್ಯತ್ಯಾಸ.

ಬಿ) ಹಾಲಿ ಪಡೆಯುತ್ತಿರುವ ವೇತನದ ಒಟ್ಟು ಮೊತ್ತ ಹಾಗೂ ಮುಂದೆ ಪಡೆಯಬಹುದಾದ ವೇತನದ ಒಟ್ಟು ಮೊತ್ತವನ್ನು ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾವಾರು ಸಿಬ್ಬಂದಿಯ ವೆಚ್ಚ.

4. ಸೇವಾ ನಿಯಮ ಮತ್ತು ಸಬ್ಸಿಡಿಯ ನಿಯಮ ರಚಿಸುವ ಪ್ರಸ್ತಾವ.

ಅ) ಸಂಸ್ಥೆಯ ಸೇವಾ ನಿಯಮ ಮತ್ತು ಒಳನಿಯಮಗಳನ್ನು ಅಳವಡಿಸಿಕೊಳ್ಳಲು ಮತ್ತು ಅಂತಹ ನಿಯಮಗಳನ್ನು ಅನುಮೋದಿಸಲು ಇಲಾಖೆಗೆ ದತ್ತವಾಗಿರುವ ಅಧಿಕಾರದ ಉದ್ಧೃತ ಭಾಗ.

ಅ(1) ಸಂಸ್ಥೆಯ ಕಾರ್ಯಕ್ಷೇತ್ರವನ್ನು ತಿಳಿಸಲು ಉಪ ನಿಯಮದ ಪ್ರತಿ.

ಆ) ಆಡಳಿತಮಂಡಳಿಗೆ ನಿಯಮಗಳನ್ನು ರಚಿಸಲು : ಮಾರ್ಪಡಿಸಲು ಇರುವ ಅಧಿಕಾರದ ಉಪ ನಿಯಮದ ಉದ್ಧೃತ ಭಾಗ.

ಇ) ಆಡಳಿತಮಂಡಳಿಯು ಇಂತಹ ನಿಯಮಗಳನ್ನು ರಚಿಸಲು ಅಂಗೀಕರಿಸಿದ ನಡವಳಿಕೆಯ ಪ್ರತಿ.

ಈ) ಹೊಸದಾಗಿ ರಚಿಸಿಕೊಳ್ಳುವ ನಿಯಮಗಳಾದರೆ ನಿಯಮಗಳನ್ನು 6 ಪ್ರತಿಗಳಲ್ಲಿ ಒಂದು ಪುಸ್ತಕ ಮಾದರಿಯಲ್ಲಿ ಸಲ್ಲಿಸಬೇಕು. ಒಂದು ವೇಳೆ ಕೇವಲ ತಿದ್ದುಪಡಿ ಇದ್ದಲ್ಲಿ ಅನುಬಂಧ–4 ಮತ್ತು ಅನುಬಂಧ–5 ನ್ನು 6 ಪ್ರತಿಗಳಲ್ಲಿ ಸಲ್ಲಿಸತಕ್ಕದ್ದು.

5. ನಿವೇಶನ/ಕಟ್ಟಡ ಖರೀದಿಸಲು ಅಥವಾ ಕಟ್ಟಡವನ್ನು ಕಟ್ಟಲು ಅನುಮತಿಗಾಗಿ ಪ್ರಸ್ತಾವ.

ಅ) ನಿಬಂಧಕರ ಸುತ್ತೋಲೆ ಸಂಖ್ಯೆ: ಆರ್ ಎಸ್ ಆರ್ 75 ಎಕ್ಸ್ ಎಂ ಎ 88–89 ದಿ:13–4–89 ಮತ್ತು ಜಿಡಿಇ.48/ಜಿಇಟಿ 91–92 ದಿ:28–8–91 ರಲ್ಲಿ ನಮೂದಿಸಿದ ಎಲ್ಲಾ ಮಾಹಿತಿಗಳು.

ಆ) ನಿವೇಶನ/ಕಟ್ಟಡ ಕೊಳ್ಳಲು ಅಥವಾ ಕಟ್ಟಡವನ್ನು ಕಟ್ಟಿಸುವುದಕ್ಕೆ ಬೇಕಾದಂತಹ ಹಣವನ್ನು ಯಾವ ನಿಧಿಯಿಂದ ಭರಿಸಲಾಗುವುದೆಂಬ ಬಗ್ಗೆ ಮಾಹಿತಿ.

ಇ) ಈ ಕೆಳಕಂಡ ಅಂಶಗಳನ್ನು ಗಮನಿಸಿ ಅವುಗಳ ಪ್ರತಿಯೊಂದಿಗೆ ಪ್ರಸ್ತಾವೆಯಲ್ಲಿ ಸೇರಿಸತಕ್ಕದ್ದು.

1. ಆಡಳಿತಮಂಡಳಿಯ ನಿರ್ದಿಷ್ಟವಾದ ನಡವಳಿಕೆಯ ಪ್ರತಿ.
2. ನಿವೇಶನ/ಕಟ್ಟಡದ ರೂಪರೇಷೆ ವಿಸ್ತೀರ್ಣ ಇತ್ಯಾದಿ.
3. ನೀಲ ನಕ್ಷೆ ಹಾಗೂ ಅಂದಾಜು ಪತ್ರಿಕೆ.
4. ನಿವೇಶನ/ಕಟ್ಟಡದ ಮೌಲೀಕರಣ ಪತ್ರ ಸಂಬಂಧಿಸಿದ ಆಸ್ತಿ ದಾಖಲಾತಿಗಳು.
5. ಸಂಸ್ಥೆಯ ಕಳೆದ ಮೂರು ವರ್ಷಗಳ ಆರ್ಥಿಕ ತಃಖ್ತೆಗಳು.
6. ಸಂಸ್ಥೆಯ ಕಾರ್ಯಕ್ಷೇತ್ರವನ್ನು ತಿಳಿಸುವ ಉಪ ನಿಯಮದ ಉದ್ಧೃತ ಭಾಗ.
7. ಕಂದಾಯ ಇಲಾಖೆ ಅಥವಾ ನೋಂದಣಿ ಇಲಾಖೆಯಿಂದ ನೀಡಲಾದ ನಿವೇಶನ ಮೌಲ್ಯ ದೃಢೀಕರಣ ಪತ್ರದ ಪ್ರತಿ ಮತ್ತು ಸರ್ಕಾರದವರು ನಿಗಧಿಪಡಿಸಿರುವ ಚದರಡಿ ಬೆಲೆಯ ಪಟ್ಟಿಯ ಪ್ರತಿ.
8. ಸಂಘದ ಉಪ ನಿಬಂಧನೆ (ಬೈಲಾ) ತಿದ್ದುಪಡಿ ಕುರಿತು–ಕಾಯ್ದೆ ಕಲಂ 12 ಮತ್ತು ನಿಯಮ 6 ರನ್ವಯ ಕಳುಹಿಸುವ ಪ್ರಸ್ತಾವೆ.

ಎ) ಉದ್ದೇಶಿತ ಬೈಲಾ ತಿದ್ದುಪಡಿಗಳಿಗೆ ನಿಯಮ 6(2) ರನ್ವಯ ನೀಡಿದ ಸೂಚನಾ ಪತ್ರ.

ಬಿ) ಉದ್ದೇಶಿತ ತಿದ್ದುಪಡಿಗಳನ್ನು ಮಹಾಸಭೆಯು ಒಪ್ಪಿಕೊಂಡಿರುವ ನಡವಳಿಕೆಯ ಪ್ರತಿ ನಿಯಮ 6(3) ರನ್ವಯ.

ಸಿ) ಸಂಸ್ಥೆಯ ಹಾಲಿ ಇರುವ ಉಪ ನಿಯಮದ ಪ್ರತಿ.

ಡಿ) ಅನುಬಂಧ–1 ರಿಂದ 6 ರವರೆಗೆ 6 ಪ್ರತಿಗಳಲ್ಲಿ.

ಇ) ಮಹಾಸಭೆಗೆ ಅವಶ್ಯವಾಗಿ ಬೇಕಾಗಿರುವ ಹಾಜರಾತಿ (ಕೋರಂ) ತೋರಿಸುವ ಉಪ ನಿಬಂಧನೆಯ ಉದ್ಧೃತ ಭಾಗ.

ಎಫ್) ಉದ್ದೇಶಿತ ತಿದ್ದುಪಡಿಗಳನ್ನು ನಿಯಮ 6(4) ರನ್ವಯ ಇಲಾಖೆಗೆ ನಿರ್ದಿಷ್ಟ ಅವಧಿಯಲ್ಲಿ ಸಲ್ಲಿಸಿರುವ ಬಗ್ಗೆ ಮಾಹಿತಿ.

ಜಿ) ಸಂಸ್ಥೆಯ ಕಳೆದ ಸಾಲಿನ ಆರ್ಥಿಕ ತಃಖ್ತೆಗಳು (ಆರ್ಥಿಕ ವ್ಯವಹಾರಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ಇದ್ದಲ್ಲಿ ಮಾತ್ರ)

ಹೆಚ್) ವೇತನ ಕಾರ್ಯದರ್ಶಿ ಕಾರ್ಯ ನಿರ್ವಹಿಸುತ್ತಿದ್ದಾರೆಯೇ ಅಥವಾ ಗೌರವ ಕಾರ್ಯದರ್ಶಿ ಕೆಲಸ ನಿರ್ವಹಿಸುತ್ತಿರುತ್ತಾರೆಯೇ ಎಂಬ ಬಗ್ಗೆ ಮಾಹಿತಿ.

1. ಬೋನಸ್ ಬದಲಾಗಿ (ಎಕ್ಸ್‌ಗ್ರೇಷಿಯಾ) ಅನುಗ್ರಹ ಪೂರ್ವಕ ಕೊಡುಗೆ ನೀಡುವ ಪ್ರಸ್ತಾವೆ.

ಅ) ಅನುಗ್ರಹ ಪೂರ್ವಕ ಕೊಡುಗೆಯನ್ನು ನೀಡಲು ಉಪನಿಯಮದಲ್ಲಿರುವ ಅವಕಾಶದ ಉದ್ಧೃತ ಭಾಗ.

ಆ) ಆಡಳಿತ ಮಂಡಳಿ ಮತ್ತು ಮಹಾಸಭೆ ಕೊಡುಗೆಯನ್ನು ನೀಡಲು ತೆಗೆದುಕೊಂಡ ತೀರ್ಮಾನದ ನಕಲು.

ಇ) ಸಂಬಂಧಪಟ್ಟ ವರ್ಷಕ್ಕೆ ಸಂಸ್ಥೆಗಳಿಸಿದ ಲಾಭದ ವಿವರ ಹಾಗೂ ಕೊಡುಗೆ ನೀಡಲು ತೆಗೆದಿಟ್ಟ ಮೊತ್ತದ ಮಾಹಿತಿ (ಆರ್ಥಿಕ ತಃಖ್ತೆಗಳ ಆಧಾರದ ಸಂಗಡ)

ಸೂಚನೆ: ಯಾವುದೇ ಕಾರಣಕ್ಕೂ ಅನುಗ್ರಹಪೂರ್ವಕ ಕೊಡುಗೆ ಬೋನಸ್ ಕಾಯ್ದೆಯಲ್ಲಿ ಲಭ್ಯವಿರುವ ಮೊತ್ತಕ್ಕೆ ಹೆಚ್ಚಾಗಿರಕೂಡದು. ಅಂದರೆ ಅನುಗ್ರಹ ಪೂರ್ವಕ ಕೊಡುಗೆ 12 ತಿಂಗಳ ಸೇವೆಗೆ ರೂ.3840.00 ಮೀರತಕ್ಕದ್ದಲ್ಲ.

2. ಮಹೋತ್ಸವ ಆಚರಿಸಲು ಅನುಮತಿ ಕುರಿತು ಪ್ರಸ್ತಾವ

ಅ) ಮಹೋತ್ಸವವನ್ನು ಆಚರಿಸಲು ಆಡಳಿತಮಂಡಳಿ ಮತ್ತು ಮಹಾಸಭೆ ತೆಗೆದುಕೊಂಡ ತೀರ್ಮಾನದ ಪ್ರತಿ.

ಆ) ಮಹೋತ್ಸವವನ್ನು ಆಚರಿಸಲು ಬೇಕಾದ ಹಣವನ್ನು ಯಾವ ನಿಧಿಯಿಂದ ಭರಿಸುವಿರೆಂಬ ಬಗ್ಗೆ ಮಾಹಿತಿ.

ಇ) ಮಹೋತ್ಸವ ಆಚರಿಸಲು ಖರ್ಚಿನ ಅಂದಾಜು ಪತ್ರಿಕೆ.

ಈ) ಸಂಸ್ಥೆಯ ಕಳೆದ ಸಾಲಿನ ಆರ್ಥಿಕ ತಃಖ್ತೆ.

ಉ) ನಿಬಂಧಕರ ಸುತ್ತೋಲೆ ಸಂಖ್ಯೆ: ಆರ್ ಎಸ್ ಆರ್ 134 ಎಕ್ಸ್ ಎಂ ಎ/91–92 ದಿ:16–7–91 ಇದರಲ್ಲಿ ನಮೂದಿಸಿದ ಎಲ್ಲಾ ಮಾಹಿತಿಗಳು.

11. ಹೊಸದಾಗಿ ಶಾಖೆಯನ್ನು ತೆರೆಯಲು ಅನುಮತಿ ಕೋರುವ ಪ್ರಸ್ತಾವ.

ಎ) ಸಂಸ್ಥೆಯ ಶಾಖೆಗಳನ್ನು ತೆರೆಯಲು ಅವಕಾಶವಿರುವ ಉಪ ನಿಬಂಧನೆಯ ಉದ್ಧೃತ ಭಾಗ.

ಬಿ) ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ತೋರಿಸುವ ಉಪ ನಿಬಂಧನೆಯ ಉದ್ಧೃತ ಭಾಗ.

ಸಿ) ಆಡಳಿತಮಂಡಳಿಯು ಶಾಖೆಯನ್ನು ತೆರೆಯಲು ಅಂಗೀಕರಿಸಿರುವ ನಡವಳಿಕೆಯ ಪ್ರತಿ.

ಡಿ) ಸಂಸ್ಥೆಯು ಪಟ್ಟಣ ಸಹಕಾರ ಬ್ಯಾಂಕಾಗಿದ್ದರೆ ಭಾರತೀಯ ರಿಸರ್ವ್ ಬ್ಯಾಂಕಿನವರು ನೀಡಿರುವ ಅನುಮತಿ ಪತ್ರದ ಪ್ರತಿ.

ಇ) ಭಾರತೀಯ ರಿಸರ್ವ್ ಬ್ಯಾಂಕಿನವರು ನಿಗಧಿಪಡಿಸಿರುವ ನಮೂನೆ–1,2,3 ಮತ್ತು 4 ರಲ್ಲಿ ಮಾಹಿತಿಗಳು.

ಎಫ್) ಸಂಸ್ಥೆಯ ಇತ್ತೀಚಿನ ಆರ್ಥಿಕ ತಃಖ್ತೆಗಳು ಹಾಗೂ ಹಾಲಿ ಇರುವ ಶಾಖೆಗಳ ವ್ಯವಹಾರದ ಸಂಕ್ಷಿಪ್ತ ವರದಿ.

ಜಿ) ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ: ಯುಬಿಡಿ (ಬಿಎಲ್) 925/5/21/ 83–84 ದಿ:7–12–83 ರಂತೆ ಬೇಕಾದ ಮಾಹಿತಿ.

ಈ ಮೇಲಿನ ಎಲ್ಲಾ ಪ್ರಸ್ತಾವೆಗಳಿಗೆ ಹೆಚ್ಚಿನ ಸಮಯ ತೆಗೆದುಕೊಳ್ಳದೇ ಅನುಮತಿ ನೀಡಬೇಕೆಂಬ ಅಭಿಪ್ರಾಯದ ಕಾರಣ, ಪ್ರಸ್ತಾವೆಯನ್ನು ಇಲಾಖೆಯ ಮುಖಾಂತರ ಕಳುಹಿಸುವಲ್ಲಿ ಕೆಳಹಂತದ ಒಂದೇ ಕಛೇರಿಯಿಂದ, ಪ್ರಸ್ತಾವೆಯನ್ನು ಮಂಜೂರು ಮಾಡುವ ಕಛೇರಿಗೆ ಸಲ್ಲಿಸುವುದು ಸೂಕ್ತವೆಂದು ಭಾವಿಸಿದೆ. ಕಾರಣ, ಆಯಾ ಸಂಸ್ಥೆಗಳು ಮತ್ತು ಇಲಾಖಾಧಿಕಾರಿಗಳು ಪ್ರಸ್ತಾವೆಗಳನ್ನು ಈ ಕೆಳಕಂಡ ಹಂತದ ಪ್ರಕಾರ ಸಲ್ಲಿಸಲು ಸೂಚಿಸಿದೆ.

| | | |
|---|---|---|
| 1 | ಪ್ರಸ್ತಾವೆಗಳನ್ನು ಜಿಲ್ಲಾ ಉಪ ನಿಬಂಧಕರುಗಳು ಮಂಜೂರು ಮಾಡಬೇಕಾಗಿದ್ದಲ್ಲಿ | ಆಯಾ ಉಪ ವಿಭಾಗದ ಸಹಾಯಕ ನಿಬಂಧಕರುಗಳ ಮುಖಾಂತರ |
| 2 | ಪ್ರಸ್ತಾವೆಗಳನ್ನು ವಿಭಾಗೀಯ ಸಂಯುಕ್ತ ನಿಬಂಧಕರುಗಳು ಮಂಜೂರು ಮಾಡಬೇಕಾಗಿದ್ದಲ್ಲಿ | ನೇರವಾಗಿ ಜಿಲ್ಲಾ ಉಪ ನಿಬಂಧಕರುಗಳ ಮುಖಾಂತರ |
| 3 | ಪ್ರಸ್ತಾವೆಗಳನ್ನು ಕೇಂದ್ರ ಕಛೇರಿ ಸಂಯುಕ್ತ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ) ಮತ್ತು ಸಹಕಾರ ಸಂಘಗಳ ನಿಬಂಧಕರು ಮಂಜೂರು ಮಾಡಬೇಕಾಗಿದ್ದಲ್ಲಿ | ಆಯಾ ಜಿಲ್ಲಾ ಉಪ ನಿಬಂಧಕರುಗಳ ಮುಖಾಂತರ ನೇರವಾಗಿ ಕೇಂದ್ರ ಕಛೇರಿಗೆ |

ವಿ.ಸೂ: ವಿಷಯ 1 ಮತ್ತು 2 ರ ಪ್ರಸ್ತಾವೆಗಳನ್ನು ಸಂಸ್ಥೆಗಳು ನೇರವಾಗಿ ಸಂಯುಕ್ತ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ) ಇವರಿಗೆ ನೇರವಾಗಿ ಸಲ್ಲಿಸಬಹುದು.

ಕಾರಣ, ಪಟ್ಟಣ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಬೇಡಿಕೆಗಳನ್ನು ಈಡೇರಿಸಲು ಅನುಕೂಲವಾಗುವಂತೆ ಎಲ್ಲಾ ಇಲಾಖಾಧಿಕಾರಿಗಳು ಮತ್ತು ಸಂಸ್ಥೆಗಳು ಮೇಲಿನಂತೆ ಕ್ರಮವಿಡಲು ವಿನಂತಿಸಿದೆ.

ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ಉಲ್ಲೇಖದಲ್ಲಿ ನಮೂದಿಸಿರುವ ಸುತ್ತೋಲೆ ರದ್ದಾಗಿದೆಯೆಂದು ಭಾವಿಸತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**

(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052**

ನಂ.ಯುಬಿಸಿ/ಯುಇಎಸ್/53/93–94 ದಿನಾಂಕ 30–08–1993

**:: ಸುತ್ತೋಲೆ –7 ::**

ವಿಷಯ:– ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 17(1) ರೀತ್ಯಾ ವೇತನಶ್ರೇಣಿ ಮತ್ತು ಪರಿಷ್ಕೃತ ವೇತನ ಶ್ರೇಣಿ ಮಂಜೂರಾತಿಗೆ ಮಾರ್ಗದರ್ಶನ ಸೂತ್ರಗಳ ಬಗ್ಗೆ.

ಉಲ್ಲೇಖ:–1) ಈ ಕಛೇರಿ ಸುತ್ತೋಲೆ ಕ್ರಮಾಂಕ: ಯುಬಿಸಿ/ಯುಸಿಎಸ್/20/93–94 ದಿ:21–05–93.

2) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಯುಬಿಸಿ/ಯುಒಬಿ/216/88–89 ದಿ:5–12–1988.

---

ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ನೌಕರರ ವೇತನ ಶ್ರೇಣಿ ಮಂಜೂರಾತಿ ವಿಷಯದಲ್ಲಿ ಉಲ್ಲೇಖಗಳಲ್ಲಿ ಸೂಚಿಸಿರುವ ಈ ಕಛೇರಿಯ ಸುತ್ತೋಲೆಯಲ್ಲಿ ಹಲವಾರು ಮಾರ್ಗಸೂಚಿಗಳನ್ನು ನೀಡಲಾಗಿತ್ತು.

ಆದರೆ ಸದರಿ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ಇಲಾಖಾಧಿಕಾರಿಗಳು ಯಥಾವತ್ತಾಗಿ ಪಾಲಿಸದೇ, ಉಲ್ಲಂಘನೆ ಮಾಡಿ ವೇತನ ಶ್ರೇಣಿಗಳನ್ನು ಮಂಜೂರು ಮಾಡುತ್ತಿರುವುದು ಗಮನಕ್ಕೆ ಬಂದಿದೆ.

ಈ ಹಿನ್ನೆಲೆಯಲ್ಲಿ ಈಗಾಗಲೇ ನೀಡಿರುವ ಮಾರ್ಗದರ್ಶನ ಸೂತ್ರಗಳನ್ನು ಪರಿಷ್ಕರಿಸಿ ಮಾರ್ಗದರ್ಶನ ಸೂತ್ರಗಳನ್ನು ನೀಡುವ ಔಚಿತ್ಯವನ್ನು ಮನಗಾಣಲಾಗಿದೆ. ಈ ದಿಶೆಯಲ್ಲಿ ಕೆಳಕಂಡ ಮಾರ್ಗದರ್ಶನ ಸೂತ್ರಗಳನ್ನು ನೀಡಲಾಗಿದೆ. ಈ ಮಾರ್ಗದರ್ಶಕ ಸೂತ್ರಗಳನ್ನು ವೇತನ ಶ್ರೇಣಿಗಳನ್ನು ಮಂಜೂರಾತಿ ನೀಡುವ ಸಂದರ್ಭದಲ್ಲಿ ಯಥಾವತ್ತಾಗಿ ಅತ್ಯಗತ್ಯವಾಗಿ ಪಾಲಿಸತಕ್ಕದ್ದು.

## ಮಾರ್ಗದರ್ಶಕ ಸೂತ್ರಗಳು

1. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ, ಶಿಫಾರಸ್ಸು ಮಾಡಿರುವ ವೇತನ ಶ್ರೇಣಿ ಮತ್ತು ಸಿಬ್ಬಂದಿ ವೃಂದಬಲದ ಮಾರ್ಗಸೂಚಿಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು.
2. ವೇತನ ಪರಿಷ್ಕರಣೆ ಐದು ವರ್ಷಗಳಿಗೊಮ್ಮೆ ಅಥವಾ ಮುಂದುವರಿದ ಅವಧಿಗೆ ಸ್ವಯಂಚಾಲಿತವಾಗಿ ಮಾಡದೇ, ಆಯಾ ಬ್ಯಾಂಕಿನ ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಮಾತ್ರ ಅವಲಂಬಿಸಿರತಕ್ಕದ್ದು.
3. ಸಿಬ್ಬಂದಿಯ ವೆಚ್ಚವು ದುಡಿಯುವ ಬಂಡವಾಳಕ್ಕೆ ನಿರ್ದಿಷ್ಟ ಪಡಿಸಿದ ಮಿತಿಯೊಳಗೆ ಇರತಕ್ಕದ್ದು.
4. ಬ್ಯಾಂಕಿನ ಶ್ರೇಣಿಯು ಒಂದು ಶ್ರೇಣಿಯಿಂದ ಇನ್ನೊಂದು ಶ್ರೇಣಿಗೆ ಪ್ರಗತಿ ಹೊಂದಿದಲ್ಲಿ ಅಂತಹ ಪ್ರಗತಿಯು ಸ್ಥಿರವಾಗಿದೆಯೇ ಎಂಬ ಬಗ್ಗೆ ಕನಿಷ್ಟ ಒಂದು ವರ್ಷದ ಆರ್ಥಿಕ ಅಂಕಿ ಅಂಶಗಳನ್ನು ಗಮನಿಸಬೇಕು. ಆರ್ಥಿಕ ಪ್ರಗತಿ ಸ್ಥಿರವಾಗಿಲ್ಲದಿದ್ದರೆ, ಶ್ರೇಣಿಯನ್ನು ನೀಡಬಾರದು.
5. ವೇತನ ಪರಿಷ್ಕರಣೆ ಸಾಮಾನ್ಯವಾಗಿ 5 ವರ್ಷಕ್ಕೆ ಒಂದು ಸಲ ಮಾಡಬಹುದು. ಆದರೆ ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ಹಿಂದಿನ ವೇತನ ಶ್ರೇಣಿ ಕಡಿಮೆ ಇದ್ದು, ಬ್ಯಾಂಕಿನ ಆರ್ಥಿಕ ಶ್ರೇಣಿಗೆ ಅನುಗುಣವಾಗಿ ಮಾರ್ಪಾಡಿಸಲು 4 ವರ್ಷಗಳ ಅಂತರದಲ್ಲಿ ಪರಿಷ್ಕರಿಸಬಹುದಾಗಿದೆ.
6. ವೇತನ ಶ್ರೇಣಿಯನ್ನು ಮಂಜೂರು ಮಾಡುವಾಗ ಅಥವಾ ಪರಿಷ್ಕರಿಸುವಾಗ ವ್ಯಕ್ತಿಗತವಾಗಿ ಶ್ರೇಣಿಯನ್ನು ಮಂಜೂರು ಮಾಡತಕ್ಕದ್ದಲ್ಲ.
7. ಯಾವುದೇ ಕಾರಣಗಳಿಂದ ಸಿಬ್ಬಂದಿ ವೃಂದಬಲ ಮತ್ತು ವೇತನಶ್ರೇಣಿಯನ್ನು ಇಲಾಖೆಯಿಂದ ಮಂಜೂರಾತಿ ಪಡೆಯದೇ, ಪ್ರಥಮವಾಗಿ ಬರುವ ಪ್ರಸ್ತಾವನೆಗಳಲ್ಲಿ ಒಂದೇ ಸಲಕ್ಕೆ ಆಯಾ ಬ್ಯಾಂಕಿನ ಆರ್ಥಿಕ ಶ್ರೇಣಿಗಳ ಆಧಾರದ ಮೇಲೆ ನೀಡದೆ ಹಾಲಿ ಪಡೆಯುತ್ತಿರುವ ಮತ್ತು ಹೊಸದಾಗಿ ಮಂಜೂರು ಕೇಳಿದ ವೇತನ ಶ್ರೇಣಿಗಳಲ್ಲಿರುವ ವೈಯಕ್ತಿಕ ವ್ಯತ್ಯಾಸವನ್ನು ಕೂಲಂಕುಷವಾಗಿ ಪರಿಶೀಲಿಸಬೇಕು. ಯಾವುದೇ ಕಾರಣಕ್ಕೆ ಹಾಲಿ ಪಡೆಯುತ್ತಿರುವ ವೇತನ ಮತ್ತು ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೈಯಕ್ತಿಕ ಪ್ರತಿಫಲ ಶೇಕಡ 30 ಕ್ಕಿಂತ ಹೆಚ್ಚಾಗಕೂಡದು.
8. ವೇತನ ಶ್ರೇಣಿ ಮಂಜೂರಾತಿಗಾಗಿ ಒಟ್ಟು ಸಿಬ್ಬಂದಿ ವೆಚ್ಚ ಮತ್ತು ದುಡಿಯುವ ಬಂಡವಾಳ ಗೊತ್ತುಪಡಿಸುವಿಕೆಗೆ ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು.

ಅ) ಸಿಬ್ಬಂದಿ ವೆಚ್ಚ ಅಥವಾ ಸಿಬ್ಬಂದಿ ಬಲ

1) ವೇತನ ಮತ್ತು ಭತ್ಯೆಗಳು

2) ಭವಿಷ್ಯ ನಿಧಿ ವಂತಿಗೆ

3) ಬೋನಸ್: ಎಕ್ಸ್ ಗ್ರೇಷಿಯಾ

4) ವೈದ್ಯಕೀಯ ಭತ್ಯೆ

5) ಸಿಬ್ಬಂದಿಗೆ ನೀಡುವ ಇತರೆ ಯಾವುದೇ ರೀತಿಯ ಭತ್ಯೆಗಳು

ಆ) ದುಡಿಯುವ ಬಂಡವಾಳ

1) ಪಾವತಿಯಾದ ಷೇರು ಬಂಡವಾಳ

2) ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು

3) ಠೇವಣಾತಿಗಳು

4) ಸಾಲಗಳು (ಪಡೆದಿದ್ದಲ್ಲಿ)

ವ್ಯಕ್ತಿಗತವಾಗಿ ಅಥವಾ ಬ್ಯಾಂಕಿನ ವೇತನ ಶ್ರೇಣಿ ಮೇಲೆ, ಕರ್ನಾಟಕ ರಾಜ್ಯ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ, ಶಿಫಾರಸ್ಸು ಮಾಡಿದ ವೇತನ ಶ್ರೇಣಿಗಿಂತಲೂ ಹೆಚ್ಚಾಗಿ ವೇತನ ಶ್ರೇಣಿ ನೀಡಬೇಕಾಗಿ ಬರುವ ಸಂದರ್ಭಗಳಲ್ಲಿ ಅಂತಹ ಪ್ರಕರಣಗಳನ್ನು ನಿಬಂಧಕರ ಒಪ್ಪಿಗೆ ಪಡೆದು ಮಂಜೂರು ಮಾಡಬಹುದಾಗಿರುತ್ತದೆ.

ಈ ಸುತ್ತೋಲೆ ಹೊರಡಿಸಿದ ದಿನಾಂಕದಿಂದ ಉಲ್ಲೇಖದಲ್ಲಿ ನಮೂದಿಸಿರುವ ಸುತ್ತೋಲೆ ರದ್ದಾಗುತ್ತದೆ.

(ಶಾಂತನು ಕನ್ಸಲ್)

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.

<u>**ಕರ್ನಾಟಕ ಸರ್ಕಾರ**</u>

(ಸಹಕಾರ ಇಲಾಖೆ)

<u>**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052**</u>

ನಂ.ಯುಬಿಸಿ/ಯುಇಎಸ್/102/93–94 ದಿನಾಂಕ 26–02–1994

<u>**:: ಸುತ್ತೋಲೆ –21 ::**</u>

ವಿಷಯ:– ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ನೌಕರರ ಪರಿಷ್ಕೃತ ವೇತನಶ್ರೇಣಿ ಕುರಿತು.

ಉಲ್ಲೇಖ:–1) ಈ ಕಛೇರಿ ಸುತ್ತೋಲೆ–7 ಸಂಖ್ಯೆ: ಯುಬಿಸಿ/ಯುಸಿಎಸ್/53/93–94 ದಿ:30–8–93.

2) ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಪತ್ರ ದಿ:23–12–1993.

---

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಆಡಳಿತಮಂಡಳಿಯು, ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ನೌಕರರ ವೇತನಶ್ರೇಣಿಗಳನ್ನು ಪರಿಷ್ಕರಿಸುವ ಬಗ್ಗೆ 1992 ರ ನವೆಂಬರ್ ನಲ್ಲಿ ನಾಲ್ಕನೇ ವೇತನ ಪರಿಷ್ಕರಣ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ಪಟ್ಟಣ ಬ್ಯಾಂಕುಗಳ ನೌಕರರ ವೇತನ ಭತ್ಯೆ ಇತ್ಯಾದಿ ಸೌಲಭ್ಯಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ವೈಜ್ಞಾನಿಕವಾದ ವರದಿಯೊಂದನ್ನು ಮಹಾಮಂಡಳಕ್ಕೆ ದಿ:29–11–1993 ರಂದು ಸಲ್ಲಿಸಿರುತ್ತದೆ. ಸದರಿ ವರದಿಯನ್ನು ದಿ:09–12–1993 ರಂದು ನಡೆದ ಮಹಾಮಂಡಳದ ನಿರ್ದೇಶಕ ಮಂಡಳಿಯು ಸರ್ವಾನುಮತದಿಂದ ಅಂಗೀಕರಿಸಿರುತ್ತದೆ. ಈ ವರದಿಯನ್ನು ಉಲ್ಲೇಖ (2) ರ ಪತ್ರದೊಂದಿಗೆ ಇಲಾಖೆಗೆ ಕಳುಹಿಸುತ್ತಾ, ವರದಿಯನ್ನು ಪರಿಶೀಲಿಸಿ ಹೊಸ ವೇತನ ಶ್ರೇಣಿಗಳನ್ನು ಕಾರ್ಯರೂಪಕ್ಕೆ ತರಲು ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಬೇಕೆಂದು ವಿನಂತಿಸಿರುತ್ತ್ತದೆ.

ಸಮಿತಿಯ ವರದಿಯನ್ನು ಇಲಾಖೆಯು ಕೂಲಂಕುಷವಾಗಿ ಪರಿಶೀಲಿಸಿ ವರದಿಯಲ್ಲಿನ ಕೆಲವೊಂದು ಶಿಫಾರಸ್ಸುಗಳನ್ನು ಈ ಕೆಳಕಂಡಂತೆ ಮಾರ್ಪಡಿಸಿದೆ.

1) ಎರಡು ವೇತನ ಪರಿಷ್ಕರಣ ಮಧ್ಯೆ ಇರಬೇಕಾದ ಅಂತರವನ್ನು ಕೈಬಿಡಲು ಸಾಧ್ಯವಾಗದು. ವೇತನ ಪರಿಷ್ಕರಣದ ಅಂತರವನ್ನು ಉಲ್ಲೇಖ (1) ರ ಸುತ್ತೋಲೆಯ ಸೂಚನೆಗಳನ್ನು ಗಮನಿಸಿ ಮಂಜೂರಾತಿ ನೀಡಬಹುದಾಗಿದೆ.

2) ಜನರೇಟರ್‌ಗಳು, ಎಮರ್ಜೆನ್ಸಿ ಲೈಟುಗಳು ಬರ್ಗಲೆರ್ ಮುಂತಾದ ಉಪಕರಣಗಳ ನಿರ್ವಹಣೆಗಾಗಿ ಬ್ಯಾಂಕಿನ ಸಿಬ್ಬಂದಿಗಳಲ್ಲಿ ಒಬ್ಬರಿಗೆ ಮಾತ್ರ ನಿರ್ವಹಣಾ ಭತ್ಯೆಯನ್ನು ನೀಡಬಹುದಾಗಿದೆ. (ವರದಿ ಪುಟ–16 ಕ್ರಮಸಂಖ್ಯೆ–3.5)

3) ವಿಶೇಷ ವೈದ್ಯಕೀಯ ಚಿಕಿತ್ಸೆಗಾಗಿ, ವಿಶೇಷ ವೈದ್ಯಕೀಯ ವೆಚ್ಚ ಪಾವತಿಸುವ ಯೋಜನೆಯನ್ನು ಒಪ್ಪಿರುವುದಿಲ್ಲ. ಆದರೆ ವಿಶೇಷ ವೈದ್ಯಕೀಯ ವೆಚ್ಚವನ್ನು ಭರಿಸುವ ಸಲುವಾಗಿ ಪ್ರತ್ಯೇಕ ವಿಮಾ ಯೋಜನೆಯನ್ನು ಅಳವಡಿಸಿಕೊಂಡು, ಬ್ಯಾಂಕ್ ವತಿಯಿಂದ ಮತ್ತು ಸಿಬ್ಬಂದಿಗಳು ಸಮಾನವಾಗಿ ವಿಮಾಕಂತನ್ನು ಭರಿಸಬಹುದಾಗಿದೆ.

4) ಬೋನಸ್ ಕಾಯ್ದೆಯಡಿಯಲ್ಲಿ ಬರಲಾರದ ಸಿಬ್ಬಂದಿಗಳು ಅನುದಾನ ಕೊಡುಗೆ ಪಡೆಯಲು ಅರ್ಹರಾಗರು. (ವರದಿ ಪುಟ–17 ಕ್ರಮಸಂಖ್ಯೆ–4.3)

5) ಸಿಬ್ಬಂದಿಯು ಅವರ ಪೂರ್ಣ ಸೇವಾವಧಿಯಲ್ಲಿ ಎರಡು ಸಲ ಮಾತ್ರ ವಾಹನ ಖರೀದಿಸುವ ಸಾಲವನ್ನು ಪಡೆಯಬಹುದಾಗಿದೆ. (ವರದಿ ಪುಟ–18 ಕ್ರಮ ಸಂಖ್ಯೆ–5.1(2))

6) ವೈಯಕ್ತಿಕ ಸಾಲ ಪಡೆದ ದಿನಾಂಕದಿಂದ ಮತ್ತೊಂದು ವೈಯಕ್ತಿಕ ಸಾಲ ಪಡೆಯಲು 5 ವರ್ಷ ಗತಿಸಿರಬೇಕು ಹಾಗೂ ಹಿಂದಿನ ಸಾಲವನ್ನು ಪೂರ್ತಿಯಾಗಿ ಮರು ಪಾವತಿಸಿರಬೇಕು. (ವರದಿ ಪುಟ–19 ಕ್ರಮ ಸಂಖ್ಯೆ –5.3)

3. ಹೊಸ ಪರಿಷ್ಕೃತ ವೇತನಶ್ರೇಣಿಗಳನ್ನು ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮತ್ತು ಎಲ್ಲಾ ಸಿಬ್ಬಂದಿಗೆ ಸ್ವಯಂಚಾಲಿತವಾಗಿ ನೀಡಲು ಬರಲಾರದು. ಆಯಾ ಬ್ಯಾಂಕಿನ ಆರ್ಥಿಕ ಪ್ರಗತಿ, ಸಿಬ್ಬಂದಿಬಲ ಮತ್ತು ಸಿಬ್ಬಂದಿವೆಚ್ಚವನ್ನು ಆಧರಿಸಿ ಈ ಕಛೇರಿಯ ಸುತ್ತೋಲೆ–7 ದಿ:30–8–1993 ರಂತೆ ಆಯಾ ಅಧಿಕಾರಿಗಳು ಪರಿಷ್ಕೃತ ಬೇಡಿಕೆಯನ್ನು ಒಪ್ಪಿ ಮಂಜೂರಾತಿ ನೀಡಬೇಕಾಗಿದೆ. ಆದರೆ 'ಡಿ' ಮತ್ತು 'ಇ' ವರ್ಗದಲ್ಲಿ ಬರುವ ಬ್ಯಾಂಕುಗಳು ಕಳೆದ 5 ವರ್ಷಗಳಲ್ಲಿ ಪ್ರತಿ ವರ್ಷ ಕನಿಷ್ಟ ಶೇ.15 ರಷ್ಟು ದುಡಿಯುವ ಬಂಡವಾಳದಲ್ಲಿ ಪ್ರಗತಿ ಹೊಂದಿದಲ್ಲಿ ಮಾತ್ರ ಈ ಹೊಸ ಪರಿಷ್ಕೃತ ವೇತನಶ್ರೇಣಿಗಳನ್ನು ನೀಡಬಹುದು.

4. ವ್ಯಕ್ತಿಗತವಾಗಿ ಅನ್ವಯಿಸುವಂತೆ ಪ್ರತ್ಯೇಕ ಶ್ರೇಣಿಯನ್ನು ಮತ್ತು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಶಿಫಾರಸ್ಸು ಮಾಡಿದ ವೇತನಶ್ರೇಣಿಗಿಂತಲೂ ಹೆಚ್ಚಿನ ವೇತನ ಶ್ರೇಣಿಯನ್ನು

ನೀಡಬಾರದು. ಅಂತಹ ಪ್ರಸಂಗಗಳು ಬಂದಲ್ಲಿ ನಿಬಂಧಕರ ಪೂರ್ವಾನುಮತಿ ಪಡೆದು ಮಂಜೂರು ಮಾಡಬಹುದಾಗಿರುತ್ತದೆ.

5. ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರ ಅಧಿನಿಯಮ 17 ರನ್ವಯ ಹೊಸ ವೇತನಶ್ರೇಣಿಗಳನ್ನು ಮಹಾಮಂಡಳದ ವರದಿಯಂತೆ ಮತ್ತು ಮೇಲ್ಕಂಡ ಮಾರ್ಪಾಡುಗಳೊಂದಿಗೆ ಮಂಜೂರು ಮಾಡಲು ಹಾಗೂ ತತ್ಸಂಬಂಧವಾದ ಅಧಿಕಾರಿಗಳು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸೇವಾ ನಿಯಮಗಳನ್ನು ನೋಂದಣಿ ಮಾಡಲು ಅನುಕೂಲವಾಗುವಂತೆ ಈ ಸುತ್ತೋಲೆಯನ್ನು ಹೊರಡಿಸಿದೆ.

6. ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ಅಧಿನಿಯಮ 17 ರಲ್ಲಿ ಅಧಿಕಾರ ಹೊಂದಿದ ಇಲಾಖಾಧಿಕಾರಿಗಳು ತಮ್ಮ ಅಧೀನದಲ್ಲಿ ಬರುವ ಆಯಾ ಬ್ಯಾಂಕಿನ ಬೇಡಿಕೆಯನ್ನು ಈ ಸುತ್ತೋಲೆ ಮತ್ತು ಉಲ್ಲೇಖ (1) ದಿ:30–08–1993 ರ ಸುತ್ತೋಲೆ–7 ರನ್ವಯ ಪರಿಶೀಲಿಸಿ ಮಂಜೂರಾತಿ ನೀಡಬಹುದಾಗಿದೆ.

7. ವೇತನ ಪರಿಷ್ಕರಣ ಸಮಿತಿಯ ವರದಿಯ ಕನ್ನಡ ಅನುವಾದಿತ ಪ್ರತಿಯನ್ನು ಎಲ್ಲಾ ಅಧಿಕಾರಿಗಳ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿ ರವಾನಿಸಿದೆ.

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**

(ಸಹಕಾರ ಇಲಾಖೆ)

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಅಸ್ಕರ್ ರಸ್ತೆ, ಬೆಂಗಳೂರು – 560052**

ನಂ.ಯುಬಿಸಿ/ಯುಸಿಎಸ್/96–97 ದಿನಾಂಕ 9–01–1997

**:: ಸುತ್ತೋಲೆ –87 ::**

ವಿಷಯ:– ಪಟ್ಟಣ ಸಹಕಾರ ಬ್ಯಾಂಕುಗಳು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಅನುಸರಿಸಬೇಕಾದ ವಿಧಿ ವಿಧಾನಗಳನ್ನು ಕುರಿತು.

---

ರಾಜ್ಯದಲ್ಲಿನ ಪಟ್ಟಣ ಸಹಕಾರ ಬ್ಯಾಂಕುಗಳು ತಮಗೆ ಅಗತ್ಯವಾದ ಸಿಬ್ಬಂದಿ ವೃಂದಬಲವನ್ನು ಮಂಜೂರು ಮಾಡಿಕೊಳ್ಳಲು ನಿಯಮ 17(1) ರಡಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆ ಪಡೆಯುತ್ತಿವೆ. ಬ್ಯಾಂಕುಗಳ ಕಾರ್ಯಕ್ಷೇತ್ರಕ್ಕೆ ಅನುಗುಣವಾಗಿ ಇಲಾಖಾಧಿಕಾರಿಗಳು ನಿಯಮ 17(1) ರಡಿಯಲ್ಲಿ ಸಿಬ್ಬಂದಿ ವೃಂದಬಲ ಮತ್ತು ವೇತನ ಶ್ರೇಣಿಗಳನ್ನು ಮಂಜೂರು ಮಾಡುತ್ತಿದ್ದಾರೆ.

ಇಲಾಖಾಧಿಕಾರಿಗಳು ನಿಯಮ 17(1) ರಡಿಯಲ್ಲಿ ಹುದ್ದೆಗಳನ್ನು ಮಂಜೂರು ಮಾಡಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳನ್ನು ಮತ್ತು ಆದೇಶದಲ್ಲಿ ವಿಧಿಸಿದ ಷರತ್ತುಗಳನ್ನು ಪಾಲಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳತಕ್ಕದ್ದೆಂದು ಸದರಿ ಮಂಜೂರಾತಿ ಆದೇಶದಲ್ಲಿ ಸೂಚಿಸುತ್ತಿದ್ದಾರೆ. ಆದರೆ ಬ್ಯಾಂಕುಗಳು ಇಲಾಖಾ ಆದೇಶಗಳನ್ನು, ನಿಬಂಧಕರು ಸುತ್ತೋಲೆಗಳನ್ನು ಮತ್ತು ಸರ್ಕಾರದ ಸೂಚನೆಗಳನ್ನು, ಅಲ್ಲದೇ ಕರ್ನಾಟಕ ಸಹಕಾರ ಸಂಘಗಳ ನಿಯಮಗಳನ್ನು ಪಾಲಿಸದೇ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಹೊಸದಾಗಿ ಆರಂಭಗೊಳ್ಳುವ ಬ್ಯಾಂಕುಗಳಿಗೆ ಸಿಬ್ಬಂದಿಗಳನ್ನು ಯಾವ ರೀತಿ ನೇಮಕಾತಿ ಮಾಡಿಕೊಳ್ಳಬೇಕು ಎಂಬ ತಿಳುವಳಿಕೆ ಇರುವುದಿಲ್ಲ. ಹೀಗಾಗಿ ಪಟ್ಟಣ ಸಹಕಾರ ಬ್ಯಾಂಕುಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಮಾಡಬಹುದಾದ ಲೋಪಗಳನ್ನು ಸರಿಪಡಿಸಲು ಇಲಾಖೆಯು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ಹಾಲಿ ಇರುವ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಹೊಸದಾಗಿ ಪ್ರಾರಂಭಗೊಂಡ ಪಟ್ಟಣ ಸಹಕಾರ ಬ್ಯಾಂಕುಗಳು ನಿಯಮ 17(1) ರಡಿಯಲ್ಲಿ ಹುದ್ದೆಗಳು ಮತ್ತು ವೇತನ ಶ್ರೇಣಿಗಳನ್ನು ಮಂಜೂರು ಮಾಡಿಸಿಕೊಂಡು ಹಾಗೂ ಈ ಕಛೇರಿಯ ಆದೇಶ ಸಂಖ್ಯೆ ಯುಬಿಸಿ–

ಯುಸಿಎಸ್/108/96-97 ದಿ:13-12-96 ರಲ್ಲಿ ನಿಯಮ 17 ರ ರೀತ್ಯಾ ಸಾಮಾನ್ಯ ಅನುಮತಿ ನೀಡಿರುವ ಆದೇಶದಂತೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವ ಪೂರ್ವದಲ್ಲಿ ಈ ಕೆಳಕಂಡ ವಿಧಿವಿಧಾನಗಳನ್ನು ಅನುಸರಿಸತಕ್ಕದ್ದು.

**<u>ಸೂಚನೆಗಳು:</u>**

1. ಹೊಸದಾಗಿ ಶಾಖೆ ತೆರೆಯಲು ಅಥವಾ ಬ್ಯಾಂಕನ್ನು ಪ್ರಾರಂಭಿಸಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಲೈಸನ್ಸ್ ಬಂದ ನಂತರವೇ ಸಿಬ್ಬಂದಿ ನೇಮಕಾತಿಯ ಬಗ್ಗೆ ಪ್ರಕ್ರಿಯೆಯನ್ನು ಪ್ರಾರಂಬಿಸತಕ್ಕದ್ದು.
2. ಪ್ರಥಮವಾಗಿ ಬ್ಯಾಂಕಿನ ಆಡಳಿತ ಮಂಡಳಿಯ ಸಭೆ ಸೇರಿ, ಅವಶ್ಯವಿರುವ ಶ್ರೇಣಿ ಮತ್ತು ಇತರೆ ಭತ್ಯೆಗಳನ್ನು ಇಲಾಖೆಯಿಂದ ಮಂಜೂರಾತಿ ಪಡೆಯಲು ಠರಾವು ಪಾಸು ಮಾಡತಕ್ಕದ್ದು.
3. ಇಲಾಖೆಯಿಂದ ಅನುಮತಿ ಪಡೆದು ಅಥವಾ ಈ ಕಛೇರಿಯ ಆದೇಶ ಸಂಖ್ಯೆ: ಯುಬಿಸಿ/ಯುಸಿಎಸ್/108/96-97, ದಿನಾಂಕ:13-12-96 ರಲ್ಲಿ ಅವಕಾಶವಿರುವಂತೆ ಸಿಬ್ಬಂದಿಗಳ ನೇಮಕಾತಿಗೆ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.
4. ಹುದ್ದೆಗಳನ್ನು ಸೇವಾ ಭರ್ತಿ (ಜುಡಿಜಥಿಣ ಡಿಜಥಿಡಿಣ್ಣುಣಟಜಟಣ) ಮತ್ತು ಪದೋನ್ನತಿ (ಔಡಿಂಟಂಣುಂಟಿ) ನೀಡುವ ಮೂಲಕ ನೇಮಕಾತಿ ಮಾಡುವ ಬಗ್ಗೆ ಹುದ್ದೆವಾರು ನಿರ್ದಿಷ್ಟ ಅನುಪಾತವನ್ನು ನಿಗದಿಪಡಿಸಿ ಸೇವಾ ನಿಯಮಗಳನ್ನು ರೂಪಿಸಿಕೊಳ್ಳತಕ್ಕದ್ದು. ಅದರಂತೆ ನೇರಸೇವಾಭರ್ತಿ ಮತ್ತು ಪದೋನ್ನತಿ ಮಾಡಿಕೊಳ್ಳತಕ್ಕದ್ದು.
5. 1960 ರ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳ ನಿಯಮ 17(3) ರ ರೀತ್ಯಾ ವೃತ್ತ ಪತ್ರಿಕೆಗಳ ಮೂಲಕ ಬ್ಯಾಂಕಿನ ವಿವರ, ಹುದ್ದೆಗಳ ವಿವರ, ವಿದ್ಯಾರ್ಹತೆ ಮತ್ತು ಅನುಭವದ ವಿವರ ಇತ್ಯಾದಿ ವಿವರಗಳನ್ನು ಒಳಗೊಂಡಂತೆ ಪ್ರಕಟಣೆ ನೀಡತಕ್ಕದ್ದು. ಇದರ ಒಂದು ಪ್ರತಿಯನ್ನು ಈ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಡತಕ್ಕದ್ದು.
6. ಈ ಕಛೇರಿಯ ಆದೇಶದ ಸಂ.ಆರ್ ಎಸ್ ಆರ್/221/ಎಕ್ಸ್ ಎಂ ಸಿ/92-93, ದಿನಾಂಕ : 17-10-92 ಮತ್ತು 21-11-92 ರ ರೀತ್ಯಾ ನೇಮಕಾತಿ ಸಮಿತಿಯನ್ನು ರಚಿಸಿ ಪ್ರಚಾರ ಪಡಿಸಿದ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳತಕ್ಕದ್ದು. ನೇಮಕಾತಿ ಸಮಿತಿಯ ಸಭೆಯನ್ನು ನಿಬಂಧಕರ ಪರವಾಗಿ ನಾಮಕರಣ ಹೊಂದಿರುವ ಅಧಿಕಾರಗಳಿಲ್ಲದೆ ನೇಮಕಾತಿ ಸಭೆಯನ್ನು ನಡೆಸತಕ್ಕದ್ದಲ್ಲ.

7. ನೇರಸೇವಾಭರ್ತಿ ಮತ್ತು ಪದೋನ್ನತಿ ನೀಡುವ ಮೂಲಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಸಹಕಾರ ಸಂಘಗಳ ನಿಯಮ 17(2) ರೀತ್ಯಾ ವಿದ್ಯಾರ್ಹತೆಯನ್ನು ಪರಿಗಣಿಸತಕ್ಕದ್ದು ಮತ್ತು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 2361/1979 ರಲ್ಲಿ 11–6–1979 ರಂದು ನೀಡಿರುವ ತೀರ್ಪಿನ ಪ್ರಕಾರ ಸದರಿ ನಿಯಮದಲ್ಲಿ ತಿಳಿಸಿರುವ ವಿದ್ಯಾರ್ಹತೆಗಳು ನೇರಸೇವಭರ್ತಿ ಮತ್ತು ಪದೋನ್ನತಿಗೆ ಅನ್ವಯಿಸುತ್ತವೆ.
8. ನೇರಸೇವಾಭರ್ತಿ ಮೂಲಕ ಮತ್ತು ಪದೋನ್ನತಿ ನೀಡುವ ಮೂಲಕ ಭರ್ತಿ ಮಾಡಿಕೊಳ್ಳುವ ಹುದ್ದೆಗಳ ಮತ್ತು ವಿದ್ಯಾರ್ಹತೆಗಳ ಬಗ್ಗೆ ಸೇವಾ ನಿಯಮಗಳಲ್ಲಿ ಅಳವಡಿಸಿಕೊಳ್ಳತಕ್ಕದ್ದು.
9. ನಿಯಮ 17(1) ರಲ್ಲಿ ತಿಳಿಸಿರುವಂತೆ ಸರ್ವಸದಸ್ಯರ ಸಭೆಯು ಮಂಜೂರು ಮಾಡಿದ ಅಯವ್ಯಯದ ಪಟ್ಟಿಗೆ ಒಳಪಟ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳತಕ್ಕದ್ದು.
10. ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಂಡು ಅವರಿಗೆ ನಿಯಮಾನುಸಾರ ತರಬೇತಿ ನೀಡಿದ ನಂತರವೇ ಕರ್ತವ್ಯದ ಜವಾಬ್ದಾರಿಯನ್ನು ವಹಿಸತಕ್ಕದ್ದು.
11. ಸರ್ಕಾರ ಮತ್ತು ಸಹಕಾರ ಸಂಘಗಳ ನಿಬಂಧಕರು ಕಾಲ ಕಾಲಕ್ಕೆ ಹೊರಡಿಸಿರುವ/ ಹೊರಡಿಸುವ ಆದೇಶ/ಸೂಚನೆಗಳನ್ನು ನೇಮಕಾತಿ ಸಮಯದಲ್ಲಿ ಪಾಲಿಸತಕ್ಕದ್ದು.

(ವಿ.ಮಧು)

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.